7ರ ಮೇರೆಗೆ ಪ್ರತಿವಾದವನ್ನು, ವಾದವನ್ನು ಕೇಳಬೇಕಾಗುತ್ತದೆ. ನಿನ್ನೆ 26ನೇ ತಾರೀಖು ಕಚೇರಿಗೆ ರಜಾ ದಿನವಾದ್ದರಿಂದ ಅವೆಲ್ಲವನ್ನೂ ಪರಿಶೀಲಿಸಲಿಕ್ಕೆ ಸಾಧ್ಯವಾಗಿಲ್ಲ. ಈ ಹಿನ್ನೆಲೆಯಲ್ಲಿ ನಿಯಮ 6ರ ಪ್ರಕಾರ ಮತ್ತು ಏನೊಂದು procedures ಎಲ್ಲಾ ಸರಿಯಾಗಿ follow ಮಾಡಿದ್ದಾರೆಯೇ ಎಂದು ಪರಿಶೀಲನೆ ಮಾಡಿ ತದನಂತರ ನಿಯಮಾವಳಿಗಳ ಮೇಲೆ ಸೂಕ್ತ ನಿರ್ಣಯವನ್ನು ನಾನು ತೆಗೆದುಕೊಳ್ಳುತ್ತೇನೆಂದು ಈ ಸದನಕ್ಕೆ ಹೇಳುತ್ತೇನೆ.

(ಗೊಂದಲ)

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಬೇಕು.

5. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ವಿಷಯ : ಬಹುಮತ ಸಾಬೀತುಗೊಳಿಸುವ ಬಗ್ಗೆ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ, Confidence motion move ಮಾಡಲಿಕ್ಕೆ ಹೇಳಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಸಬ್ಜೆಕ್ಟ್ ನಮ್ಮ ಕಣ್ಣು ಮುಂದೆ ಇರುವುದು ಮಾಡುವ ಬಗ್ಗೆ ನೀವು ಬೇರೆ ಯಾವುದಕ್ಕೂ ಸಮಯಕೊಡುವುದಕ್ಕೆ ಬರುವುದಿಲ್ಲ ನೀವು ಬೇರೆಯದಕ್ಕೆ ಸಮಯ ಕೊಡುವುದಕ್ಕೆ ಬರುವುದಿಲ್ಲ ಸರ್ ಸಭಾನಾಯಕರು ಬಂದ ತಕ್ಷಣವೇ confidence motion ಅನ್ನು ಮೂವ್ ಮಾಡಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಮೂವ್ ಮಾಡಿಸಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಇಲ್ಲಿ ಏನು ನಡೆಯುತ್ತದೆ ಎಂದು live ಆಗುತ್ತಿರುವುದನ್ನು ಇಡೀ ರಾಜ್ಯದ, ಇಡೀ ದೇಶದ ಜನತೆ ನೋಡುತ್ತಾ ಇದ್ದಾರೆ, ಸರ್.

(ಗೊಂದಲ)

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು : ಇಲ್ಲಿ ಏನು ನಡೆಯುತ್ತಿದೆ ಎನ್ನುವುದನ್ನು ಇಡೀ ರಾಜ್ಯದ ಜನತೆ ನೋಡುತ್ತಿದ್ದಾರೆ. ಎಲ್ಲಾ live ಆಗುತ್ತಿದೆ.

(ಗೊಂದಲ)

ಅಧ್ಯಕ್ಷರು : ದಯಮಾಡಿ ಎಲ್ಲಾ ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರ ಅನುಕೂಲಕ್ಕೆ ತಕ್ಕಂತೆ ಆಗುವುದಿಲ್ಲ ಸರ್. ಅದನ್ನು ಬಿಟ್ಟು ಬೇರೆ ಯಾವುದೇ ವಿಷಯವನ್ನು ತೆಗೆದುಕೊಳ್ಳುವುದು ಸರಿಯಲ್ಲ.

(ಗೊಂದಲ)

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಸಭಾನಾಯಕರನ್ನು ಕರೆಸಿ ಸರ್. ಸಭಾನಾಯಕರನ್ನು ಕರೆಸಿ confidence motion move ಮಾಡುವುದಕ್ಕೆ ಹೇಳಿ ಸಾರ್.

(ಗೊಂದಲ)

ಅಧ್ಯಕ್ಷರು : ನಾನು ಹೇಳಿ ಕಳುಹಿಸಿದ್ದೇನೆ. ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಿಮ್ಮ ತೀರ್ಪನ್ನು ನಾವು ಒಪ್ಪುತ್ತೇವೆ. ನಿಮ್ಮ ತೀರ್ಪನ್ನು ನಾವು ಗೌರವಪೂರ್ವಕವಾಗಿ ಒಪ್ಪುತ್ತೇವೆ. ಆದರೆ ....

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಸಭೆ ಕರೆದಿರುವುದು ಅವರು ವಿಶ್ವಾಸಮತವನ್ನು ಕೋರುವುದಕ್ಕಾಗಿಯೇ. ಅದು ಬಿಟ್ಟು ಬಹುಮತ ಕಳೆದುಕೊಂಡಿರುವಂತಹ ಸಂದರ್ಭದಲ್ಲಿ ಅಡ್ಡಾದಿಡ್ಡಿಯಲ್ಲಿ ಹೋಗುವಂತಹ ಪ್ರಯತ್ನವನ್ನು ಕಾಂಗ್ರೆಸ್‌ನವರು ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಮುಖ್ಯಮಂತ್ರಿಗಳನ್ನು ಕರೆಸಿ.

(ಗೊಂದಲ)

ಅಧ್ಯಕ್ಷರು : ನೀವು ಎಲ್ಲರೂ ಹೀಗೆ ಎದ್ದು ನಿಂತುಕೊಂಡು ಮಾತನಾಡಿದರೆ ಹೇಗೆ?

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಿಮ್ಮ ತೀರ್ಪನ್ನು ಒಪ್ಪುತ್ತೇವೆ. ನಿಮ್ಮ ಗಮನಕ್ಕೆ ಒಂದು ಅಂಶವನ್ನು ನಾನು ತರಬೇಕಾಗಿದೆ. ಒಂದೇ ಒಂದು point ಇದೆ. ದಯಮಾಡಿ ಅದಕ್ಕೆ ಒಂದು ಸೆಕೆಂಡ್ ಅವಕಾಶ ಮಾಡಿಕೊಡಿ.

(ಗೊಂದಲ)

Mr. Speaker : Please, please ....ಒಂದು ನಿಮಿಷದಲ್ಲಿ ಬರುತ್ತಾರೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಮುಖ್ಯಮಂತ್ರಿಗಳು ಸದನಕ್ಕೆ ಬರುತ್ತಾರೋ ಇಲ್ಲವೋ ಹೇಳಿ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ಒಂದೇ ಒಂದು ಸೆಕೆಂಡ್ ನಮಗೆ ಅವಕಾಶ ಮಾಡಿಕೊಡಿ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಈಗ ಮುಖ್ಯಮಂತ್ರಿಗಳನ್ನು ಕರೆಸುತ್ತೀರೋ ಇಲ್ಲವೋ ದಯವಿಟ್ಟು ಹೇಳಿ. ಮುಖ್ಯಮಂತ್ರಿಗಳು ಬರುತ್ತಾರೋ ಇಲ್ಲವೋ ಅದನ್ನು ಈಗ ಹೇಳಬೇಕು.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಇವತ್ತು ಇಡೀ ಕರ್ನಾಟಕ ರಾಜ್ಯ ನೋಡುತ್ತಿರುವುದು ಮುಖ್ಯಮಂತ್ರಿಗಳು ವಿಶ್ವಾಸ ಮತವನ್ನು ಪಡೆಯುತ್ತಾರೋ ಇಲ್ಲವೋ ಎನ್ನುವುದು. ದಯವಿಟ್ಟು ಮುಖ್ಯಮಂತ್ರಿಗಳನ್ನು ಕರೆಸಿ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಮುಖ್ಯಮಂತ್ರಿಗಳು ಬಂದು ವಿಶ್ವಾಸ ಮತವನ್ನು ಕೋಡಿ ಮಂಡನೆ ಮಾಡಬೇಕು. ಮುಖ್ಯಮಂತ್ರಿಗಳು ಎಲ್ಲಿ ಹೋಗಿದ್ದಾರೆ ಎಂಬುದನ್ನು ದಯವಿಟ್ಟು ಸದನಕ್ಕೆ ಹೇಳಬೇಕು.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನನಗೆ ದಯಮಾಡಿ ಒಂದೇ ಒಂದು ಸೆಕೆಂಡ್ ಅವಕಾಶ ಮಾಡಿ ಕೊಡಬೇಕು.

(ಗೊಂದಲ)

ಅಧ್ಯಕ್ಷರು : ದಯಮಾಡಿ ಈಗ ಒಬ್ಬೊಬ್ಬರೇ ಮಾತನಾಡಿ.

(ಗೊಂದಲ)

ಅಧ್ಯಕ್ಷರು : ನನ್ನ permission ತೆಗೆದುಕೊಂಡು ಮಾತನಾಡಿ. ಇದೆಲ್ಲಾ ಏನು ಆಗಿದೆ ಅಂದರೆ.... ಈ ತರಹ ಮಾತನಾಡಿದರೆ ಹೇಗೆ?

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಅಲ್ಲ ಅಧ್ಯಕ್ಷರೆ, ಈ ಸದನ ಕರೆದಿರುವ ಉದ್ದೇಶ ವಿಶ್ವಾಸ ಮತ ಮಂಡನೆ ಮಾಡುವುದಕ್ಕೆ ಇಲ್ಲಿ ಮುಖ್ಯಮಂತ್ರಿಗಳೇ ಇಲ್ಲ. ಅಲ್ಲೂ ಇಲ್ಲ ಮುಖ್ಯಮಂತ್ರಿಗಳು. ಎಲ್ಲಿ ಹೋಗಿದ್ದರೂ ಮುಖ್ಯಮಂತ್ರಿಗಳು. ತಮಗೆ ಹೇಳಿ ಹೋಗಿದ್ದಾರೆಯೇ? ತಮ್ಮ permission ತೆಗೆದುಕೊಂಡು ಹೋಗಿದ್ದಾರೆಯೇ?

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ತಮ್ಮನ್ನು ಕೇಳಿ ಹೋಗಿದ್ದಾರೆಯೇ? ದಯಮಾಡಿ ಹೇಳಿ. ಅವರು ಏಕೆ ಇನ್ನೂ ಮಂಡನೆ ಮಾಡುತ್ತಾ ಇಲ್ಲ? ಅದು ಇಡೀ ಕರ್ನಾಟಕದ ಜನತೆ ನೋಡುತ್ತಿದ್ದಾರೆ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಿಮ್ಮ ಮಧ್ಯಂತರ ತೀರ್ಪಿಗೆ ಬೆಲೆ ಕೊಡುತ್ತಿದ್ದೇವೆ. ದಯವಿಟ್ಟು ಒಂದೇ ಒಂದು ಸೆಕೆಂಡ್ ಅವಕಾಶ ಕೊಡಿ. ಆಮೇಲೆ ಅವರು ಏನಾದರೂ ಬೇಕಾದರೂ ಮಾಡಿಕೊಳ್ಳಲಿ. ನಿಮ್ಮ ತಾತ್ಕಾಲಿಕ ರೂಲಿಂಗ್ ಅನ್ನು ನಾವು ಒಪ್ಪುತ್ತೇವೆ. ನಾವು ಒಂದೇ ಒಂದು clarification ಅನ್ನು ಕೇಳಿ ಕುಳಿತುಕೊಳ್ಳುತ್ತೇವೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಮುಖ್ಯಮಂತ್ರಿಗಳು ತಮ್ಮ ಅನುಮತಿ ಪಡೆದು ಹೋಗಿದ್ದಾರೆಯೇ? ಇಲ್ಲವೇ? ಇವತ್ತು ಇಡೀ ಕರ್ನಾಟಕ ರಾಜ್ಯದಲ್ಲಿ ಮುಖ್ಯಮಂತ್ರಿಗಳು ವಿಶ್ವಾಸ ಮತವನ್ನು ಪಡೆಯುತ್ತಾರೋ ಇಲ್ಲವೋ ಎಂದು ನೋಡುತ್ತಿದ್ದಾರೆ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೇ....

(ಗೊಂದಲ)

ಅಧ್ಯಕ್ಷರು : ಈಶ್ವರಪ್ಪನವರೇ, ಮಾನ್ಯ ರಾಯರೆಡ್ಡಿಯವರು ಆಗಿನಿಂದಲೂ ಏನೋ ಮಾತನಾಡುತ್ತೇನೆ, ಮಾತನಾಡುತ್ತೇನೆ ಎಂದು ಹೇಳುತ್ತಿದ್ದಾರೆ. ಅವರು ಮಾತನಾಡಲಿ.

(ಗೊಂದಲ)

ಅಧ್ಯಕ್ಷರು : ಹೀಗೆ ನೀವು ಎಲ್ಲರೂ ನಿಂತುಕೊಂಡು ಮಾತನಾಡಿದರೆ ನಮಗೆ ಯಾವುದನ್ನೂ ಕೇಳುವುದಕ್ಕೆ ಆಗುತ್ತಿಲ್ಲವಲ್ಲಾ

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಈಗ ಮುಖ್ಯಮಂತ್ರಿಗಳು ನಿಮ್ಮ permission ತೆಗೆದುಕೊಂಡು ಹೋಗಿದ್ದಾರೆಯೇ ಎಂದು ತಾವು ಹೇಳಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು : ಬರುತ್ತಾರೆ. ಬರುತ್ತಾರೆ.

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜು : ಯಾವಾಗ ಬರುತ್ತಾರೆ? ನಿಮ್ಮ permission ತೆಗೆದುಕೊಂಡು ಹೋಗಿದ್ದಾರೆಯೇ?

(ಗೊಂದಲ)

ಅಧ್ಯಕ್ಷರು : ಬರುತ್ತಾರೆ. ಬರುತ್ತಾರೆ, ಬರುತ್ತಾರೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಯಾವಾಗ ಬರುತ್ತಾರೆ?

(ಗೊಂದಲ)

ಅಧ್ಯಕ್ಷರು : ನಿಧಾನ ಮಾಡಿ

ಶ್ರೀ ಅರಗ ಜ್ಞಾನೇಂದ್ರ : ದಯವಿಟ್ಟು ಮತಕ್ಕೆ ಹಾಕಬೇಕು ಸರ್.

(ಗೊಂದಲ)

ಶ್ರೀ ಎ. ನಾರಾಯಣ ಸ್ವಾಮಿ : ಪ್ರಜಾಪ್ರಭುತ್ವದಲ್ಲಿ ಗೌರವ ಇದ್ದರೆ, ಸದನದ ಮೇಲೆ ಗೌರವ ಇದ್ದರೆ ಈ ತಕ್ಷಣ ಮುಖ್ಯಮಂತ್ರಿಗಳು ಸಭೆಗೆ ಬಂದು ವಿಶ್ವಾಸ ಮತವನ್ನು ಯಾಚಿಸಬೇಕು.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ : ಅಧ್ಯಕ್ಷರೆ, ಈ ಎಲ್ಲಾ ವಿಚಾರಗಳನ್ನು ಕೈಬಿಡಿ. ನಾವು ನಿಮ್ಮ ಮೇಲೆ ಕೆಲವು ಸಂಶಯಗಳನ್ನು ವಿವಾದಗಳನ್ನು ಕೆಲವು ವ್ಯಕ್ತ ಪಡಿಸಿರುವುದರಿಂದ ತಾವು ಇಂದಿನ ಕಾರ್ಯಕಲಾಪ ನಡೆಸಲಿಕ್ಕೆ.....

ಶ್ರೀ ಕೆ. ಶ್ರೀನಿವಾಸಗೌಡ : ಅದು ಕಾನೂನು ಬಾಹಿರ ಇದೆಯಾ ಇಲ್ಲವಾ ಎಂಬುದನ್ನು ತಾವು ಹೇಳುತ್ತೀರಿ. ಇವರು ಏಕೆ ಹೀಗೆ ಮಾತನಾಡುತ್ತಿದ್ದಾರೆ?

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ನಿಮ್ಮ ಅನುಮತಿ ತೆಗೆದುಕೊಂಡಿದ್ದಾರೋ ಇಲ್ಲವೋ.

(ಗೊಂದಲ)

ಅಧ್ಯಕ್ಷರು : ಬರುತ್ತಾರೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಅವರು ನಿಮ್ಮ ಅನುಮತಿ ತೆಗೆದುಕೊಂಡಿದ್ದಾರೋ ಇಲ್ಲವೋ ಎಂದು ದಯವಿಟ್ಟು ಈ ಸದನಕ್ಕೆ ತಿಳಿಸಿ. ನಿಮ್ಮ ಅನುಮತಿ ತೆಗೆದುಕೊಂಡು ಹೋಗಿದ್ದಾರೋ, ಇಲ್ಲವೋ ಎಂಬುದನ್ನು ದಯವಿಟ್ಟು ಸದನಕ್ಕೆ ತಿಳಿಸಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು : ನಾನು ಹೇಳಿಕಳುಹಿಸಿದ್ದೇನೆ. ಸ್ವಲ್ಪನಿಧಾನ ಮಾಡಿ. ಇನ್ನು 10 ನಿಮಿಷದಲ್ಲಿ ಬರುತ್ತಾರೆಂದು ಹೇಳುತ್ತಿದ್ದಾರೆ. ಸ್ವಲ್ಪ ಸಮಾಧಾನವಾಗಿರಿ. ಇನ್ನು 10 ನಿಮಿಷದಲ್ಲಿ ಬರುತ್ತಾರೆಂದು ಹೇಳುತ್ತಾರೆ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಸಾರ್, ನನಗೆ ಕ್ಲಾರಿಫಿಕೇಷನ್‌ಗೆ ಅವಕಾಶ ಕೊಡಿ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಸಾರ್, ನಾವು ಹೇಳುವುದು ಇಷ್ಟೆ ಸಾರ್, ಇವತ್ತು ರಾಜ್ಯಪಾಲರು ಹೇಳಿದ ಪ್ರಕಾರ, ತಾವು ಸದನವನ್ನು ಕರೆದಿದ್ದೀರಿ. ಮುಖ್ಯಮಂತ್ರಿಗಳು ಇವತ್ತು ....

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಇವತ್ತು ಅವರು ವಿಶ್ವಾಸ ಮತವನ್ನು ಮಂಡನೆ ಮಾಡಬೇಕಾಗಿತ್ತು.

(ಗೊಂದಲ)

ಅಧ್ಯಕ್ಷರು : ಕುಳಿತುಕೊಳ್ಳಿ ಈಶ್ವರಪ್ಪನವರೆ, ಕುಳಿತುಕೊಳ್ಳಿ ಶ್ರೀರಾಮರೆಡ್ಡಿಯವರೇ ದಯಮಾಡಿ. ನನ್ನ ಪೇಷನ್ಸ್ ಟೆಸ್ಟ್ ಮಾಡುತ್ತಿದ್ದೀರಿ ನೀವು. ಇವತ್ತು ಕಾನ್‌ಫಿಡೆನ್ಸ್ ವೋಟ್ ಕೇಳಲಿಕ್ಕೆ ಮಾನ್ಯ ರಾಜ್ಯಪಾಲರು ಸೂಚನೆ ಮಾಡಿದ್ದಾರೆ.

(ಗೊಂದಲ)

ಅಧ್ಯಕ್ಷರು : ದಯಮಾಡಿ ಯಾರೂ ಮಾತನಾಡಬಾರದು.

(ಗೊಂದಲ)

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಬೇಕು.

(ಗೊಂದಲ)

ಅಧ್ಯಕ್ಷರು : ದಯಮಾಡಿ ಸೂಚನೆ ಮಾಡಿದ್ದಾರೆ. ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು : ಅವರು ಬರುತ್ತಾರೆ. ಸಮಾಧಾನದಿಂದ ಇರಿ.

(ಗೊಂದಲ)

ಶ್ರೀ ಎನ್.ಎಸ್. ಬೋಸರಾಜು : ಅದು ಅಜೆಂಡಾದಲ್ಲಿ ಬಂದಿರಲಿಲ್ಲ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೆ, ನಾನು ಪತ್ರ ಕೊಟ್ಟಿದ್ದೇನೆ. ದಯಮಾಡಿ.....

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ : xxx ಅದಕ್ಕೆ ಒಂದು ಪತ್ರವನ್ನು ಕೊಟ್ಟಿದ್ದೇವೆ. ಆ ಪತ್ರವನ್ನು ನಾನು, ನಮ್ಮ ಸದಸ್ಯರು ಕೊಟ್ಟಿದ್ದೇವೆ. ಅದನ್ನು ಒದಲಿಕ್ಕೆ ತಾವು ಅನುಮತಿಯನ್ನು ಕೊಡಬೇಕಾಗುತ್ತದೆ. xxx

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ತಾವು ಉತ್ತರ ಕೊಡುತ್ತೀರಾ ಹೇಗೆ ಅಧ್ಯಕ್ಷರೆ?

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ : xxx

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ : xxx

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನನಗೆ ಒಂದು ಕ್ಲಾರಿಫಿಕೇಷನ್‌ಗೆ ಅವಕಾಶ ಕೊಡಿ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ : ನಾನು ಮತ್ತು ನಮ್ಮ ಇನ್ನತಿರ ಸದಸ್ಯರು ತಮ್ಮ ಮೇಲೆ ಕೆಲವು ವಿವಾದಗಳಿವೆ,

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ದಯವಿಟ್ಟು ಯಾರನ್ನಾದರೂ ಕಳುಹಿಸಿ. ಮುಖ್ಯಮಂತ್ರಿಗಳು ಬರಲಿ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ದಯವಿಟ್ಟು, ಮುಖ್ಯಮಂತ್ರಿಗಳನ್ನು ಕರೆಸಬೇಕು ಅಧ್ಯಕ್ಷರೆ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಸಾರ್, ಮಾನ್ಯ ಮುಖ್ಯಮಂತ್ರಿಗಳು ಬರುತ್ತಾರೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಯಾವಾಗ? 5 ಗಂಟೆಯಾಯಿತು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಪ್ರಜಾತಂತ್ರ ವ್ಯವಸ್ಥೆಯಲ್ಲಿ ಇದು ಅಪಚಾರ. ಇದು ಬೇಜವಾಬ್ದಾರಿತನದ ವರ್ತನೆ. ನಾವು ಇದನ್ನು ಸಹಿಸಬೇಕೇನು?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಅಲ್ಲಿ ಲಿ ಮೆರಿಡಿಯನ್ ಹೋಟೆಲ್‌ನಲ್ಲಿ ಕುಳಿತಿದ್ದಾರೆ. ಅವರನ್ನು ಕರೆಯಿರಿ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಸನ್ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು : ಏನು ಹೇಳ್ರಿ. ರೂಲಿಂಗ್ ಕೊಟ್ಟಿದ್ದೀನಲ್ಲಾ. ಮಿಸ್ಟರ್ ಶ್ರೀರಾಮರೆಡ್ಡಿ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಸಾರ್ ನನ್ನದೊಂದು ಕ್ಲಾರಿಫಿಕೇಷನ್.

---

xxx ಈ ಪದಗಳನ್ನು ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಹಾಗಾದರೆ, ಕ್ಲಾರಿಫಿಕೇಷನ್ ಕೇಳಲಿಕ್ಕೆ ಅವಕಾಶವಿಲ್ಲವೇ? ಕ್ಲಾರಿಫಿಕೇಷನ್ ಕೇಳುವುದಕ್ಕೆ ಅವಕಾಶವಿಲ್ಲವೆಂದು ಹೇಳಿ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ನಿಮ್ಮ ತೀರ್ಪಿಗೆ ವಿರುದ್ಧವಾಗಿ ನಾನು ಮಾತನಾಡುತ್ತಿಲ್ಲ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಈ ಸದನ ಕಾಂಗ್ರೆಸ್ ಏಜೆಂಟರ ಪಾಲಾಗಲು ನಾವು ಬಿಡುವುದಿಲ್ಲ. ಯಾವುದೇ ಕಾರಣಕ್ಕೂ ಕಾಂಗ್ರೆಸ್ ಮತ್ತು ಕಾಂಗ್ರೆಸ್ ಏಜೆಂಟರ ಸದನವಲ್ಲ ಇದು.

ಅಧ್ಯಕ್ಷರು : ಮಾನ್ಯ ಶ್ರೀರಾಮರೆಡ್ಡಿಯವರೇ, ದಯಮಾಡಿ ಕುಳಿತುಕೊಳ್ಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಿಮ್ಮ ತೀರ್ಪನ್ನು ನಾವು ಗೌರವಿಸುತ್ತೇವೆ. ನಮಗೆ ಒಂದು ಕ್ಲಾರಿಫಿಕೇಷನ್ ಕೇಳಲು ಅವಕಾಶ ಕೊಡಿ.

ಅಧ್ಯಕ್ಷರು : ದಯಮಾಡಿ ಕೇಳಿ, ನಿಮ್ಮ ಪಿಟಿಷನ್ ಕೊಟ್ಟಿದ್ದೀರಿ. ನಾನು ಎಲ್ಲವನ್ನೂ ವಿವರವಾಗಿ ಹೇಳಿದ್ದೇನೆ. ಅದರ ಬಗ್ಗೆ ಎನ್‌ಕ್ವೈರಿಯಾಗಬೇಕಾಗುತ್ತದೆ, ಎವಿಡೆನ್ಸ್, ತೆಗೆದುಕೊಳ್ಳಬೇಕಾಗುತ್ತದೆ, ನಿಯಮಗಳು ಹಿರಿಯ ಸದಸ್ಯರಾದ ತಮಗೂ ಗೊತ್ತಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಿಮ್ಮ ತೀರ್ಪನ್ನು ನಾನು ವಿರೋಧ ಮಾಡುತ್ತಿಲ್ಲ.

ಅಧ್ಯಕ್ಷರು : ದಯಮಾಡಿ ಕೇಳಿ. That cannot be discussed here. ಅದಕ್ಕೇ ಒಂದು ನಿಯಮಾವಳಿ ಇದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ತಮ್ಮ ತೀರ್ಪನ್ನು ನಾನು ವಿರೋಧ ಮಾಡುತ್ತಿಲ್ಲ. ನಿಮ್ಮ ತೀರ್ಪಿಗೆ ನಮ್ಮ ವಿರೋಧವಿಲ್ಲ, ಕ್ಲಾರಿಫಿಕೇಷನ್ ಕೇಳುತ್ತೇವೆಂದು ಎಷ್ಟು ಸಲ ಕೇಳುವುದು.

ಅಧ್ಯಕ್ಷರು : ತಾವು ಒಂದನ್ನು ದಯಮಾಡಿ ಕೇಳಿ. ನಾನು ಹೇಳುತ್ತೇನೆ. FIR ಹಾಕಿದ ತಕ್ಷಣ ಗಲ್ಲಿಗೇರಿಸುವುದಿಲ್ಲ. ನೀವೇನು ಪಿಟಿಷನ್ ಕೊಟ್ಟಿದ್ದೀರೋ, ಅದರ ಬಗ್ಗೆ ಎನ್‌ಕ್ವೈರಿ ಮಾಡಬೇಕೆಂದು ನಾನು ರೂಲಿಂಗ್ ಕೊಟ್ಟಿದ್ದೇನೆ. Are you questioning my ruling?

Sri G.V. Sri Rama Reddy : Sir, I am very sorry.ನಾವು ನಿಮ್ಮ ತೀರ್ಪನ್ನು ಪ್ರಶ್ನೆ ಮಾಡುತ್ತಿಲ್ಲ.

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ. ನನಗೂ ಸಾಕಾಗಿ ಹೋಗಿದೆ.

ಶ್ರೀ ಕೆ.ಎಸ್. ಈಶ್ವರಪ್ಪ : ಯಾವುದೇ ಕಾರಣಕ್ಕೂ ಇವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಬಾರದು. ನೀವು ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ವಿಶ್ವಾಸ ಮತ ಯಾಚನೆ ಮಾಡುವುದಕ್ಕೆ ಅವಕಾಶ ಮಾಡಿಸಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಮ್ಮ ರೂಲಿಂಗ್ ಅನ್ನು ಅವರು ಹೇಗೆ ಪ್ರಶ್ನೆ ಮಾಡುತ್ತಾರೆ? ಸಾರ್.

ಅಧ್ಯಕ್ಷರು : ಏನೋ, ಅದು ಅವರಿಗೆ ಬಿಟ್ಟಿದ್ದು, ದಯಮಾಡಿ ಶ್ರೀರಾಮರೆಡ್ಡಿಯವರೆ, ರೂಲಿಂಗ್ ಕೊಟ್ಟಿದ್ದೇನೆ. ದಯಮಾಡಿ ಕುಳಿತುಕೊಳ್ಳಿ. ಅದರ ಬಗ್ಗೆ ನಂಬಿಸುವುದು ಬೇಡಿ. ಅದನ್ನು

ನಂಬಿಸತಕ್ಕಂತ ಅಗತ್ಯ ಇಲ್ಲ ಕ್ಲಾರಿಫಿಕೇಷನ್ ಅಗತ್ಯ ಇಲ್ಲ. ದಯವಾಡಿ ತಾವು ಕುಳಿತುಕೊಳ್ಳಬೇಕೆಂಬುದೇ ನನ್ನ ವಿನಂತಿ

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ದಯವಿಟ್ಟು ನಾನು ನಿಮ್ಮ ತೀರ್ಪನ್ನು ವಿರೋಧ ಮಾಡುತ್ತಿಲ್ಲ. ದಯವಿಟ್ಟು ಕ್ಷಮಿಸಿ. ನಾವು ಕೇಳುವುದಿಷ್ಟೆ. ನಾವು ನಿಮ್ಮ ತೀರ್ಪನ್ನು ಒಪ್ಪುತ್ತಿದ್ದೇವೆ, ನಿಮ್ಮ ತೀರ್ಮ ಆಗುವವರೆಗೆ ಈ ಸದನವನ್ನು ಮುಂದೂಡಿ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಇಲ್ಲಿ ಕಾಂಗ್ರೆಸ್ ಏಜೆಂಟ್ ಕೆಲಸ ಮಾಡಲು ಬಿಡಬೇಡಿ.

ಶ್ರೀ ಎನ್. ಚೆಲುವರಾಯಸ್ವಾಮಿ : ಮಾನ್ಯ ಕುಮಾರಸ್ವಾಮಿಯವರಿಗೆ ಫ್ಲೋರ್ ಲೀಟರ್ ಆಗಿ ದಯಮಾಡಿ ತಾವು ಮಾನ್ಯತೆಯನ್ನು ಕೊಡಬೇಕು. ಮಾನ್ಯ ಕುಮಾರಸ್ವಾಮಿಯನ್ನು 19ನೇ ತಾರೀಖು 47 ಜನ ಶಾಸಕರು 2/3 majority ಸೈನ್ ಮಾಡಿ ಕೊಟ್ಟಿದ್ದೇವೆ. ದಯಮಾಡಿ ಫ್ಲೋರ್ ಲೀಡರ್ ಆಗಿ ಅನೌನ್ಸ್ ಮಾಡಬೇಕು. ದಯಮಾಡಿ ಕುಮಾರಸ್ವಾಮಿಯವರನ್ನು ಫ್ಲೋರ್ ಲೀಡರ್ ಆಗಿ ಮಾಡಬೇಕು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಬಹುಮತದೊಂದಿಗೆ ಆಯ್ಕೆಯಾಗಿರುವಂಥ ಜೆಡಿ(ಎಸ್) ನಾಯಕನಾಗಿ ಆಯ್ಕೆಯಾಗಿರುವಂಥ ಕುಮಾರಸ್ವಾಮಿಯವರನ್ನು, ಆ ದಿನ ಯಾವ ರೀತಿಯಾಗಿ ಎಂ.ಪಿ. ಪ್ರಕಾಶ್‌ರವರನ್ನು ನಾಯಕರೆಂದು ಘೋಷಣೆ ಮಾಡಿದರೂ, ತಿಪ್ಪಣ್ಣನವರು, ಅಧ್ಯಕ್ಷರೇ, ಬಂದು ಭೇಟಿ ಮಾಡಿ ಕೊಟ್ಟಿರುವುದರಿಂದ ಅವರನ್ನು ನಾಯಕರೆಂದು ಘೋಷಣೆ ಮಾಡಿಬಿಟ್ಟು ನಂತರ ಸಭಾನಾಯಕರು ಅವರ ಕಾನ್ಫಿಡೆನ್ಸ್ ಮೋಷನ್ ಮೂವ್ ಮಾಡುವುದಕ್ಕೆ ಅವಕಾಶ ಮಾಡಿಕೊಡಿ. ಆ ನಾಯಕತ್ವದ ಬಗ್ಗೆ ಸ್ಪಷ್ಟವಾಗಿ ಹೇಳಬೇಕು. ಆ ಆದೇಶವನ್ನು ಕ್ಲಿಯರ್ ಮಾಡಿ.

(ಗೊಂದಲ)

ವಿಶ್ವಾಸಮತ ಯಾಚನೆ ಪ್ರಾರಂಭವಾದ ಮೇಲಾದರೂ ಮಾಡಿ; ಒಟ್ಟಿನಲ್ಲಿ ಅದರ ಬಗ್ಗೆ ಇವತ್ತು ತೀರ್ಮಾನ ಕೊಡಿ.

ಅಧ್ಯಕ್ಷರು : ಆಯಿತು ನಾನು ಕೇಳುತ್ತಿದ್ದೇನೆ ತಾವು ಹೇಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಫ್ಲೋರ್ ಲೀಡರ್‌ನ್ನು ರೆಕಗ್ನೈಸ್ ಮಾಡಿ ಎಂದು ಬಹಳ ಒತ್ತಾಯ ತರುತ್ತಿದ್ದಾರೆ. ಒತ್ತಾಯ ಪೂರ್ವಕವಾಗಿ ಕೇಳುತ್ತಿದ್ದಾರೆ. ಯಾವ ಸ್ಥಾನ ಖಾಲಿನೇ ಬಿದ್ದಿಲ್ಲ ಆ ಸ್ಥಾನಕ್ಕೆ ನೀವು ಭರ್ತಿ ಮಾಡತಕ್ಕಂತ ವಿಧಾನ ಏನು? ಇನ್ನೂ ಡೆಪ್ಯೂಟಿ ಚೀಫ್ ಮಿನಿಸ್ಟರ್ ಮಿಸ್ಟರ್ ಪ್ರಕಾಶ್‌ರವರು ಆ ಒಂದು ಜೆಡಿ ಎಸ್‌ನ ಮುಖಂಡರಾಗಿದ್ದಾರೆ....

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಬಹುಮತ ಹೋದ ಮೇಲೆ ಕುರ್ಚಿಗೆ ಸಲ್ಲಿಸುವ ಗೌರವ ಇದು. ಇದು ಕುರ್ಚಿ ಆಸೆ, .. ಇದು ಕುರ್ಚಿ ಆಸೆ..

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜು : ಒಬ್ಬೊಬ್ಬರಿಗೆ ಒಂದೊಂದು ನ್ಯಾಯವಲ್ಲ. ಅದಕ್ಕೊಂದು ನ್ಯಾಯ ಇದಕ್ಕೊಂದು ನ್ಯಾಯ ಅಲ್ಲ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರ ಬಾಯಲ್ಲಿ ಈ ಮಾತು ಬರಬಾರದಾಗಿತ್ತು. ಹಿಂದುಳಿದ ವರ್ಗದ ನಾಯಕರಾದ ಸಿದ್ಧರಾಮಯ್ಯರವರನ್ನು ತೆಗೆದಾಗ ಇವರ ಬಾಯಲ್ಲಿ ಈ ಮಾತು ಬರಲಿಲ್ಲ. ಒಬ್ಬ ದಲಿತರು, ಕೆಪಿಸಿಸಿ ಅಧ್ಯಕ್ಷರು ಎಂದು ಹೇಳಿಕೊಂಡು ಹಿಂದುಳಿದ ವರ್ಗಗಳಿಗೆ ಮಾಡತಕ್ಕಂಥ ಅನ್ಯಾಯ ಇದು.. ದ್ರೋಹ ಇದು..

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇಲ್ಲಿ ಹಿಂದುಳಿದ ಮುಂದುವರಿದ ಪ್ರಶ್ನೆಯಲ್ಲ. ಇಲ್ಲಿ ಕಾನೂನು... ನೀವು ಆಗ ಏನು ಮಾಡಿದಿರಿ? ಮಲಗಿದ್ದರಾ?

ಶ್ರೀ ಕೆ.ಎಸ್. ಈಶ್ವರಪ್ಪ : ಹಿಂದುಳಿದ ವರ್ಗದ ನಾಯಕನಿಗೆ ಮಾಡಬೇಕಾದರೆ ಇದು ಆಗಲಿಲ್ಲ. ಇದು ಇದ್ದಕ್ಕಿದ್ದಂತೆ ಅನ್ಯಾಯ ಮಾಡುತ್ತಿದ್ದಾರೆ. ಕಾಂಗ್ರೆಸ್ ಪಕ್ಷದ ನೀತಿ ಹಿಂದುಳಿದ ವರ್ಗಗಳ ದ್ರೋಹಿಗಳೆಂದು ಈಗ ತೋರಿಸುತ್ತಿದ್ದಾರೆ..

(ಗೊಂದಲ)

ಸಿದ್ದರಾಮಯ್ಯನವರನ್ನು ತೆಗೆದಾಗ ಬಾಯಲ್ಲಿ ಏನು ಇಟ್ಟುಕೊಂಡಿದ್ದಿರಿ; ಈಗ ಮಾತನಾಡುತ್ತೀರಾ? ಆವಾಗ ಮಾತನಾಡಬೇಕಾದರೆ ಬಾಯಲ್ಲಿ ಏನೂ ಇರಲಿಲ್ಲವೆ ನಿಮಗೆ; ಸಿದ್ಧರಾಮಯ್ಯನವರಿಗೆ ಮಾಡಿದಾಗ ನಿಮಗೆ ಏನಾಗಿತ್ತು? ಈಗ ಮಾತನಾಡುತ್ತೀರಾ?

(ಗೊಂದಲ)

ಅಧ್ಯಕ್ಷರು : ದಯಮಾಡಿ. ನೀವು ಹೇಳಿ....

ಶ್ರೀ ಮಲ್ಲಿಕಾರ್ಜುನ ಖರ್ಗೆ : ಹೇಳುತ್ತಾ ಇದ್ದೇನೆ ನೀವು ಕಿವಿಗೊಟ್ಟರೆ ತಾನೆ?

ಅಧ್ಯಕ್ಷರು : ಆಯಿತು ಹೇಳಿ...

ಶ್ರೀ ಮಲ್ಲಿಕಾರ್ಜುನ ಖರ್ಗೆ : ಈಗ ಇದು ಕಾನೂನಿನ ಪ್ರಶ್ನೆ. ಇದು ಹಿಂದುಳಿದವರು ಮುಂದುವರಿದವರ ಪ್ರಶ್ನೆಯಲ್ಲ. ಕಾನೂನಿನ ಚೌಕಟ್ಟಿನಲ್ಲಿ ಯಾವುದೇ ಒಂದು ಸ್ಥಾನವನ್ನು ಖಾಲಿ ಇದ್ದಾಗ ಮಾತ್ರ ಅದನ್ನು ತುಂಬತಕ್ಕಂಥದ್ದಕ್ಕೆ ವ್ಯವಸ್ಥೆ ಮಾಡಿ, ಕಾನೂನಿನ ಪ್ರೊಸೀಜರ್ ಪ್ರಕಾರ ಮಾಡತಕ್ಕಂಥದ್ದು ವ್ಯವಸ್ಥೆ ಇದೆ. ಇವತ್ತು ಇನ್ನೂ ....

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಸಿದ್ದರಾಮಯ್ಯನವರನ್ನು ತೆಗೆದು ಹಾಕಿದಾಗ ಖಾಲಿ ಇತ್ತಾ? ನೀವು ಹೇಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅದೂ ಮಾಡಿದವರು ನೀವೇ, ಇದೂ ಮಾಡಿದವರು ನೀವೇ. It is all a game of vested interests. xxx

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅದು ಮಾಡಿದವರು ನೀವೇ ಇದು ಮಾಡಿದವರು ನೀವೇ..

(ಗೊಂದಲ)

ಅಧ್ಯಕ್ಷರೆ, ನನಗೆ ಅವಕಾಶ ಮಾಡಿಕೊಡಿ.

---

xxx ಈ ಪದಗಳನ್ನು ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಖರ್ಗೆಯವರು ಏನು ಹೇಳುತ್ತಾರೆ ಕೇಳಿ. ಅವರು ಮೊದಲು ಹೇಳಲಿ. ದಯಮಾಡಿ ಇಲ್ಲಿ ಕೇಳಿ. ಅವರು ಏನು ಹೇಳುತ್ತಿದ್ದಾರೆ ಅದನ್ನು ಕೇಳುವ ವ್ಯವಧಾನ ಇಲ್ಲದಿದ್ದರೆ ಹೇಗೆ? ದಯಮಾಡಿ ಕೇಳಿ. ಅವರು ಹೇಳಿದ ಆದ ಮೇಲೆ ನೀವು ಹೇಳಿ. ಅವರು ಏನು ಹೇಳುತ್ತಾರೆ ಕೇಳೋಣ ಆ ನಂತರ....

ಶ್ರೀ ಎನ್. ಚೆಲುವರಾಯಸ್ವಾಮಿ : ಅವರು ಹೇಳಿದ ಮೇಲೆ ನಮಗೂ ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

ಅಧ್ಯಕ್ಷರು : ಚೆಲುವರಾಯಸ್ವಾಮಿಯವರೇ, ದಯಮಾಡಿ ಕುಳಿತುಕೊಳ್ಳಿ. ನಾನು ಖರ್ಗೆಯವರನ್ನು ಕರೆದಿದ್ದೇನೆ. ಅವರು ಏನು ಹೇಳುತ್ತಾರೆ ಕೇಳಿ. ದಯಮಾಡಿ ಆ ನಂತರ ತಾವು ಏನಾದರೂ ಮಾತನಾಡಿ. ಈಗ ಖರ್ಗೆಯವರು ಮಾತನಾಡುತ್ತಾರೆ.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪೂರ್ : ಆವಾಗಲೂ ರಾಜ್ಯಾಧ್ಯಕ್ಷರು ಕೊಟ್ಟಿದ್ದಾರೆ. ಇವತ್ತು ರಾಜ್ಯಾಧ್ಯಕ್ಷರು ಕೊಟ್ಟಿದ್ದಾರೆ, ಆವತ್ತು ಯಾವ ರೀತಿ ಮಾನ್ಯ ಮಾಡಿದ್ದಿರೋ ಇವತ್ತು ಅದೇರೀತಿ ಮಾನ್ಯ ಮಾಡಬೇಕು.. ಇಲ್ಲ ಅದು ಎಲ್ಲಾ ಸುಳ್ಳು; ರಾಷ್ಟ್ರೀಯ ಅಧ್ಯಕ್ಷರು ಯಾವ ಪತ್ರವನ್ನೂ ಕೊಟ್ಟಿಲ್ಲ. ಅದಕ್ಕೂ ಇದಕ್ಕೂ ಸಂಬಂಧವಿಲ್ಲ. ರಾಜ್ಯಾಧ್ಯಕ್ಷರ ಪತ್ರವನ್ನೇ ಪರಿಗಣನೆ ಮಾಡತಕ್ಕಂಥದ್ದು.

ಅಧ್ಯಕ್ಷರು : ಈಗ ಅವರೇನು ಹೇಳುತ್ತಿದ್ದಾರೆ ಮೊದಲು ಕೇಳಿ, ಕೇಳುವ ವ್ಯವಧಾನ ಇಲ್ಲದೆ ಇದ್ದರೆ ಹೇಗೆ?.. ವೆಂಕಟೇಶ್‌ರವರೇ, ದಯಮಾಡಿ ಕುಳಿತುಕೊಳ್ಳಿ.. ಏನು ಹೇಳುತ್ತಾರೆ ಕೇಳೋಣ, ಕೇಳುವುದಕ್ಕೆ ರೆಡಿ ಇಲ್ಲದೆ ಇದ್ದರೆ ಹೇಗೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇವತ್ತು ನನ್ನ ಪ್ರಶ್ನೆ ಇಷ್ಟೇ. ವೇಕೆನ್ಸಿ ಇದ್ದಾಗ ಅದನ್ನು ಫಿಲ್‌ಅಪ್ ಮಾಡುವುದಕ್ಕೆ ಎಲ್ಲಾ ಪದ್ಧತಿಗಳು ಪ್ರೊಸೀಜರ್ಸ್ ಕಾನೂನನ್ನು ಅನ್ವಯಿಸಿ ಮಾಡಿದ್ದರೆ ಅದು ಒಂದು ಪದ್ಧತಿ, ಕ್ರಮ, ಆದರೆ ಇವತ್ತು ಇನ್ನೂ ಜೆಡಿಎಸ್ ಲೆಜಿಸ್ಲೇಚರ್ ಪಾರ್ಟಿ ಮುಖಂಡ ನಾನೇ ಎಂದು ಹೇಳಿ ಪ್ರಕಾಶ್‌ರವರು ಒಂದು ಸಲ ಅಲ್ಲ ಅನೇಕ ಸಾರಿ ಹೇಳಿದ್ದಾರೆ. ರಾಷ್ಟ್ರೀಯ ಅಧ್ಯಕ್ಷರೂ ಕೂಡ ನನ್ನ ಪಕ್ಷದ ಅಧಿಕೃತ ಜೆಡಿಎಲ್‌ಪಿ ಲೀಡರ್ ಶ್ರೀಮಾನ್ ಪ್ರಕಾಶ್ ಅವರೇ ಎನ್ನತಕ್ಕಂಥ ಮಾತನ್ನು ಕೂಡ ಹೇಳಿದ್ದಾರೆ.

ಶ್ರೀ ಡಿ.ಟಿ. ಜಯಕುಮಾರ್ : ರಾಜ್ಯಾಧ್ಯಕ್ಷರು ಕೊಟ್ಟಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನೀವೇ ಮೊದಲು ಮಾತನಾಡಿ. ನಾನು ಆಮೇಮೆ ಮಾತನಾಡುತ್ತೇನೆ. ನೀವು ಮಾತನಾಡಿದ ಮೇಲೆ ನಾನು ಮಾತನಾಡುತ್ತೇನೆ. ಪೂರ್ತಿಯಾಗಿ ಅವರು ಮಾತನಾಡಲಿ.

(ಗೊಂದಲ)

ಅಧ್ಯಕ್ಷರು : ಜಯಕುಮಾರ್ ರವರೇ, ಅವರಿಗೆ ಮಾತನಾಡಲಿಕ್ಕೆ ಅವಕಾಶ ಕೊಡಿ.

ಶ್ರೀ ಡಿ.ಟಿ. ಜಯಕುಮಾರ್ : ಪ್ರಜಾಪ್ರಭುತ್ವದಲ್ಲಿ ಅವತ್ತೊಂದು ಕಾನೂನು ಇವತ್ತೊಂದು ಕಾನೂನು; ಅವತ್ತು ಏಕೆ ಕೇಳಲಿಲ್ಲ?

ಅಧ್ಯಕ್ಷರು : ಅವರು ಏನು ಹೇಳುತ್ತಾರೆ ಅದಕ್ಕೆ ಅವಕಾಶ ಮಾಡಿಕೊಡಿ.

ಶ್ರೀ ಡಿ.ಟಿ. ಜಯಕುಮಾರ್ : 19ನೇ ತಾರೀಖೇ ಮೆಜಾರಿಟಿ ಕಳೆದುಕೊಂಡಿದ್ದಾರೆ ಮತ್ತೆ ಮುಂದುವರಿದು ವ್ಯಾಖ್ಯಾನ ಹೇಳುವುದಕ್ಕೆ ಬಂದಿದ್ದಾರೆ, ಅವತ್ತು ಸಿದ್ಧರಾಮಯ್ಯರವರನ್ನು ತೆಗೆದಾಗ

ಎಂ.ಪಿ. ಪ್ರಕಾಶ್‌ರವರನ್ನು ಮಾಡಿದಾಗ ಎಲ್ಲಿಗೆ ಹೋಗಿದ್ದರು? ಖರ್ಗೆಯವರು ಆ ದಿನವೇ ಹೇಳುವುದಕ್ಕೆ ಆಗುತ್ತಿರಲಿಲ್ಲಿವೆ? ಅವತ್ತು ರಾಜ್ಯಾಧ್ಯಕ್ಷರು ಕೊಟ್ಟಿದ್ದರು, ಇವತ್ತೂ ಕೂಡ ರಾಜ್ಯಾಧ್ಯಕ್ಷರು ಕೊಟ್ಟಿದ್ದಾರೆ. ಅದನ್ನು ದಯವಿಟ್ಟು ಮನ್ನಣೆ ಮಾಡಿ ಹೆಚ್.ಡಿ. ಕುಮಾರಸ್ವಾಮಿ ಅವರನ್ನು ಫ್ಲೋರ್ ಲೀಡರ್ ಎಂದು ಘೋಷಣೆ ಮಾಡಬೇಕೆಂದು ಕೇಳುತ್ತಿದ್ದೇವೆ.

(ಗೊಂದಲ)

ಶ್ರೀ ಬಸವರಾಜ್ ರಾಯರೆಡ್ಡಿ : ಇವತ್ತಿನ ಕಾರ್ಯ ಕಲಾಪಗಳನ್ನು ನಡೆಸುವುದಕ್ಕೆ ತಾವು ವಿವಾದಿತವಾದಂಥ ವ್ಯಕ್ತಿಯಾಗಿದ್ದೀರಿ. ಆ ಹಿನ್ನೆಲೆಯಲ್ಲಿ ತಾವು ಕಾರ್ಯಕಲಾಪಗಳನ್ನು ಬೇರೆಯವರಿಗೆ ವಹಿಸಿಕೊಡಬೇಕೆಂದು ಈಗ ಪತ್ರ ಕೊಡುತ್ತೇವೆ, ದಯಮಾಡಿ ಈಗ ಅದನ್ನು ಓದಲಿಕ್ಕೆ ಅನುಮತಿಯನ್ನು ಕೊಡಬೇಕು.

ಶ್ರೀ ಕೆ.ಎಸ್. ಈಶ್ವರಪ್ಪ : ಏನೇನೋ ಓದುತ್ತಾರೆ ಅದಕ್ಕೆ ಅವಕಾಶ ಕೊಡುತ್ತಿದ್ದೀರಾ ಯಾರು ಇದು ಯಾರು ಕೇಳುತ್ತಿದ್ದಾರೆ?

(ಗೊಂದಲ)

ಶ್ರೀ ಎನ್. ಚೆಲುವರಾಯಸ್ವಾಮಿ : ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಿ. ನಂತರ ನಾವು ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕು..

(ಗೊಂದಲ)

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಯಾವ ಸದಸ್ಯರು ಯಾವುದೇ ವಿಚಾರ ಎತ್ತಿದರೂ ಅದನ್ನು ಮೊದಲು ಕೇಳಿ. ಅದಕ್ಕೆ ನಾನು ರೂಲಿಂಗ್ ಇದ್ದರೆ ರೂಲಿಂಗ್ ಕೊಡುತ್ತೇನೆ. ಆದರೆ ಎಲ್ಲರೂ ಸಮಾಧಾನದಿಂದ ಒಬ್ಬೊಬ್ಬರಾಗಿ ಮಾತನಾಡತಕ್ಕಂಥ ಅವಕಾಶ ಮಾಡಿಕೊಡಿ...

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ಅವರಿಗೆ ಬಹುಮತ ಇಲ್ಲ. ಸದನದ ಸಮಯ ವೇಸ್ಟ್ ಆಗುತ್ತಿದೆ. ಆದ್ದರಿಂದ, ಇದರ ಬಗ್ಗೆ ತಾವು ದಯವಿಟ್ಟು ಕ್ರಮ ತೆಗೆದುಕೊಳ್ಳಬೇಕು. ಅವರುಗಳು ಏನೇನೋ ಮಾತನಾಡುತ್ತಿದ್ದಾರೆ ನೋಡಿ....

(ಗೊಂದಲ)

ಶ್ರೀ ಸಿ. ಚೆನ್ನಿಗಪ್ಪ : ಅವರ ಪಾರ್ಟಿಗೂ ನಮ್ಮ ಪಾರ್ಟಿಗೂ ಯಾವುದೇ ಸಂಬಂಧವಿಲ್ಲ.

(ಗೊಂದಲ)

ಶ್ರೀ ಆರ್. ಅಶೋಕ್ : ಮಾನ್ಯ ಅಧ್ಯಕ್ಷರೆ, ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಡಿ.

ಶ್ರೀ ಅರಗಜ್ಞಾನೇಂದ್ರ : ಪಾಯಿಂಟ್ ಆಫ್ ಆರ್ಡರ್ ಬಗ್ಗೆ ಮಾತನಾಡುತ್ತಿದ್ದರು.

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ವಿಶ್ವಾಸಮತವನ್ನು ಹಾಕುವುದಕ್ಕೆ ಸದನದ ನಾಯಕರಿಗೆ ದಯವಿಟ್ಟು ಹೇಳಿ. ಯಾರ್ಯಾರೋ ಏನೇನೋ ಮಾತನಾಡಿ ಸದನವನ್ನು ಎಲ್ಲೆಲ್ಲಿಗೋ ಎಳೆದುಕೊಂಡು ಹೋಗುತ್ತಿದ್ದಾರೆ. ಒಂದೊಂದು ಗಂಟೆನೂ ಅಧಿಕಾರದಲ್ಲಿ ಮುಂದುವರಿಯಬೇಕು ಮತ್ತು ಆಡಳಿತ ಪಕ್ಷದಲ್ಲಿರಬೇಕೆಂದು ಅವರಿಗೆ ಆಸೆ ಇದೆ. ಆದರೆ ಎರಡು ವರ್ಷಗಳಿಂದ ಇವರಿಗೆ

ಕೆಲಸ ಮಾಡುವುದಕ್ಕೆ ಆಗಲಿಲ್ಲ. ಆದರೆ, ಒಂದೊಂದು ಗಂಟೆ ಆದರೂ ಅಧಿಕಾರದಲ್ಲಿರಬೇಕೆಂದು ಇವರಿಗೆ ಆಸೆ ಇದೆ. ಇವರಿಗೆ ಏನು ಚಟ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ : ತಾವು ಅಧ್ಯಕ್ಷರಾಗಿ ಗೌರವಿತ ಹುದ್ದೆಯಲ್ಲಿದ್ದೀರಿ. ಆದ್ದರಿಂದ, ತಾವು ಅಧ್ಯಕ್ಷರಾಗಿದ್ದಂಥ ಕಾಲದಲ್ಲಿ ಈ ಒಂದು ಕಾನ್‌ಫಿಡೆನ್ಸ್ ನಿರ್ಣಯವನ್ನು ತಂದಿರತಕ್ಕಂಥ ಸಮಯದಲ್ಲಿ ತಾವು ಜಾತ್ಯಾತೀತ ಜನತಾದಳದ ರಾಷ್ಟ್ರೀಯ ಅಧ್ಯಕ್ಷರಾಗಿರುವಂಥ ಶ್ರೀ ಹೆಚ್.ಡಿ. ದೇವೇಗೌಡರ ಮನೆಗೆ ಹೋಗಿ .....

(ಗೊಂದಲ)

ಶ್ರೀ ಹೆಚ್.ಕೆ. ಪಾಟೀಲ್ : ಮಾನ್ಯ ರಾಯರೆಡ್ಡಿಯವರು ಮಾತನಾಡುವುದಕ್ಕೆ ಮಾನ್ಯ ಸಭಾಧ್ಯಕ್ಷರು ಅವಕಾಶ ಕೊಟ್ಟಿದ್ದಾರೆ.

(ಗೊಂದಲ)

ಅಧ್ಯಕ್ಷರು : ದಯವಮಾಡಿ ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಬಸವರಾಜ ರಾಯರೆಡ್ಡಿಯವರು ಈಗ ಏನು ಪ್ರಸ್ತಾಪ ಮಾಡಿದ್ದಾರೆಯೋ ಅದರ ಬಗ್ಗೆ ಹೇಳುವುದಾದರೆ, ಜಾತ್ಯಾತೀತ ಜನತಾದಳದ ರಾಷ್ಟ್ರೀಯ ಅಧ್ಯಕ್ಷರಾದ ಮಾನ್ಯ ದೇವೇಗೌಡರ ಆರೋಗ್ಯ ಸ್ಥಿತಿ ಚೆನ್ನಾಗಿಲ್ಲವೆಂದು ತಿಳಿದು ನಾನು ಊರಿನಿಂದ ಬರುವಾಗ ಅವರನ್ನು ಕಂಡಿದ್ದು ನಿಜ.

(ಗೊಂದಲ)

ಅಧ್ಯಕ್ಷರು : ನಾನು ಹೇಳುವುದನ್ನು ದಯಮಾಡಿ ಕೇಳಿ. ಎಲ್ಲರೂ ಮೊದಲು ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು : ನಾನು ಹೇಳುವುದನ್ನು ಕೇಳಿ. ಈ ವಿಚಾರವನ್ನು ಮೀಡಿಯಾದವರು ಕೇಳಿದಾಗ, ಅವರು ನಾಯಕರು, ಮಾಜಿ ಪ್ರಧಾನಿಗಳು ಅವರ ಆರೋಗ್ಯವನ್ನು ನಾನು ಊರಿನಿಂದ ಬರುವಾಗ ನೋಡಿಕೊಂಡು ಬಂದಿದ್ದೇನೆ. ಮತ್ತೆ ನಾನು ಯಾವುದೇ ರಾಜಕೀಯ ವಿಚಾರವನ್ನು ಯಾರ ಹತ್ತಿರವೂ ಪ್ರಸ್ತಾಪ ಮಾಡಿಲ್ಲ ಎನ್ನತಕ್ಕಂಥ ಮಾತನ್ನು ಸ್ಪಷ್ಟವಾಗಿ ಹೇಳಿದ್ದೇನೆ. ಯಾರಾದರೂ ವೈಯಕ್ತಿಕವಾಗಿ ಅವರಿಗೆ ಹುಷಾರು ಇಲ್ಲವೆಂದು ಹೇಳಿದಾಗ ಅಥವಾ ಇನ್ಯಾವುದೇ ಸಂದರ್ಭದಲ್ಲಿ ಅವರ ಮನೆಗೆ ಹೋಗಬಾರದು ಎಂಬ ಬಾರ್ ಏನೂ ಇಲ್ಲ. ಆದ್ದರಿಂದ, ಈ ಒಂದು ಕಾರಣದಿಂದ ಅದರ ಬಗ್ಗೆ ವಿವರಣೆಯನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. I have given my explanation. ಈಗ ಜನತಾದಳದ 41 ಜನ ಶಾಸಕರು ಮಾನ್ಯ ತಿಪ್ಪಣ್ಣನವರ ಅಧ್ಯಕ್ಷತೆಯಲ್ಲಿ 18ನೇ ತಾರೀಖಿನ ದಿವಸ ಸಭೆ ಸೇರಿ ....

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ನಾವು ಇನ್ನೂ ಮಾತನಾಡಬೇಕಾಗಿದೆ.

(ಗೊಂದಲ)

ಅಧ್ಯಕ್ಷರು : ಮಾತನಾಡುವುದಕ್ಕೆ ಯಾರೂ ಬಿಡದೆ ಇದ್ದರೆ ನಾನು ಏನು ಕೇಳುವುದಕ್ಕೆ ಆಗುತ್ತದೆ?

ಶ್ರೀ ಬಸವರಾಜ್ ರಾಯರೆಡ್ಡಿ : ಹೌಸ್‌ನ್ನು ಅಡ್ಜರ್ನ್ ಮಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ನನ್ನದೊಂದು ಪಾಯಿಂಟ್ ಆಫ್ ಆರ್ಡರ್.

(ಗೊಂದಲ)

ಅಧ್ಯಕ್ಷರು : ಹೇಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಈ ಸಂದರ್ಭದಲ್ಲಿ ಏನು ಪಾಯಿಂಟ್ ಆಫ್ ಆರ್ಡರ್?

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಈ ಸದನದಲ್ಲಿ ಬೆಳಿಗ್ಗೆಯಿಂದ ಯಾವುದಾದರೂ ಸಹ ಕಾನೂನು ಪ್ರಕಾರ ನಡೆಯುತ್ತಿದೆಯೇ? ಇವರು ಬಹುಮತವನ್ನು ಪೂರ್ಣವಾಗಿ ಕಳೆದುಕೊಂಡಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಹೆಚ್.ಕೆ. ಪಾಟೀಲರೆ, ಒಂದು ನಿಮಿಷ ನಾನು ಮಾತನಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ಹೆಚ್.ಕೆ. ಪಾಟೀಲ್ : ತಾವು ರೂಲಿಂಗ್ ಕೊಟ್ಟ ಮೇಲೆ ಸನ್ಮಾನ್ಯ ಯಡಿಯೂರಪ್ಪನವರು ಎತ್ತಿರತಕ್ಕಂಥ ಪಾಯಿಂಟ್ ಆಫ್ ಆರ್ಡರ್ ಬಗ್ಗೆ ಚರ್ಚೆಗೆ ತೆಗೆದುಕೊಳ್ಳಬಹುದು. ಇವರು ಪಾಯಿಂಟ್ ಆಫ್ ಆರ್ಡರ್ ಬಗ್ಗೆ ಮಾತನಾಡುತ್ತಿರುವಾಗ ಮತ್ತೆ ಮಾನ್ಯ ಯಡಿಯೂರಪ್ಪನವರಿಗೆ ಅವಕಾಶ ಕೊಡತಕ್ಕಂಥದ್ದು ಸರಿಯಲ್ಲ. ಇದು ನಿಯಮಕ್ಕೆ ಬಾಹಿರವಾಗಿರತಕ್ಕಂಥದು ಆದ್ದರಿಂದ ದಯಮಾಡಿ ಈ ರೀತಿ ಮಾಡುವುದಕ್ಕೆ ಹೋಗಬೇಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಅಧ್ಯಕ್ಷ ಪೀಠದಲ್ಲಿ ಕುಳಿತುಕೊಂಡಿದ್ದೀರಿ. ಇವತ್ತು ಕುಮಾರಸ್ವಾಮಿಯವರನ್ನು ನಾಯಕರಾಗಿ ನಾವು ಒಪ್ಪಿಕೊಂಡಿದ್ದೇವೆಂದು ಆ ಪಕ್ಷದ ಅಧ್ಯಕ್ಷರಾದ ಶ್ರೀ ತಿಪ್ಪಣ್ಣನವರು ಬಂದು ಅವರ ಸದಸ್ಯರ ಸಮಕ್ಷಮ ತಮಗೆ ಮನವಿಯನ್ನು ಸಲ್ಲಿಸಿದ್ದಾರೆ. ಐದಾರು ದಿವಸ ಆದರೂ ಸಹ ತಾವು ಅಂದರೆ, ಬಹುಶಃ ಒಂದು ರಾಜ್ಯದ ಇತಿಹಾಸದಲ್ಲಿ ಇಂಥ ವಿಷಯಗಳನ್ನು ತೀರ್ಮಾನ ತೆಗೆದುಕೊಳ್ಳುವುದಕ್ಕಿಂತ ಮುಂಚೆ ಅನೇಕ ನ್ಯಾಯಾಲಯದಲ್ಲಿ ಪರಿಣಿತರಾಗಿದವರಿಂದ ಮತ್ತು ಶಾಸನಸಭೆ ನಡವಳಿಕೆಯಲ್ಲಿ ಯಾರು ಪರಿಣಿತರು ಇದ್ದಾರೆ ಅಂಥವರ ಜೊತೆ ಚರ್ಚೆ ಮಾಡಿ ಒಂದು ನಿರ್ಣಯಕ್ಕೆ ಬರುತ್ತೇನೆ ಎಂಬ ಮಾತನ್ನು ತಾವು ಹೇಳಿದ್ದೀರಿ. ಮತ್ತೆ ಇದಕ್ಕೆ ಸಂಬಂಧಪಟ್ಟಂತೆ ತಾವು ತಮ್ಮದೇ ಆದಂಥ ಸಮಯವನ್ನೂ ಸಹ ತೆಗೆದುಕೊಂಡಿದ್ದೀರಿ. ಇವತ್ತು ತಾವು ನಿಂತು ಆ ತೀರ್ಪನ್ನು ಕೊಡುವುದಕ್ಕೆ ಹೊರಟಿದ್ದೀರಿ. ನಿಮ್ಮ ತೀರ್ಪನ್ನು ಪ್ರಶ್ನೆ ಮಾಡತಕ್ಕಂಥ ಅಧಿಕಾರ ನಮಗ್ಯಾರಿಗೂ ಸಹ ಇಲ್ಲ. ಆದ್ದರಿಂದ, ತಾವು ತೀರ್ಪನ್ನು ಕೊಡುವಂತ ಸಂದರ್ಭದಲ್ಲಿ ಯಾವುದೇ ಚರ್ಚೆ ಬೇಡ. ತಾವು ಎಲ್ಲರ ಜೊತೆ ಸಮಾಲೋಚನೆ ಮಾಡಿ ಯಾವ ತೀರ್ಮಾನವನ್ನು ತೆಗೆದುಕೊಂಡಿದ್ದೀರೆಂಬುದನ್ನು ಈ ಸದನಕ್ಕೆ ತಾವು ಹೇಳಬೇಕು. ನಂತರ ಸನ್ಮಾನ್ಯ ನಾಯಕರು ವಿಶ್ವಾಸಮತ ಮಂಡನೆ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕು. ತಾವು ಆಗಲೇ ಪ್ರೊನೌನ್ಸ್ ಮಾಡಲಿಕ್ಕೆ ಶುರು ಮಾಡಿದಿರಿ. ಆದ್ದರಿಂದ, ಮಧ್ಯದಲ್ಲಿ ರದ್ದು ಮಾಡುವುದಕ್ಕೆ ಬರುವುದಿಲ್ಲ. ಆದ್ದರಿಂದ ನನ್ನ ಪಾಯಿಂಟ್ ಆಫ್ ಆರ್ಡರ್ ಏನೆಂದರೆ, ನೀವು ನಿಮ್ಮ ತೀರ್ಮಾನವನ್ನು ಹೇಳುವುದಕ್ಕೆ ಹೊರಟಾಗ ಅದನ್ನು ಮಧ್ಯದಲ್ಲಿ ತಡೆಯತಕ್ಕಂಥ ಅಧಿಕಾರ ನಮಗ್ಯಾರಿಗೂ ಇಲ್ಲ. ಆದ್ದರಿಂದ, ತಾವು ಏನೊಂದು ಓದುವುದಕ್ಕೆ ಹೊರಟಿದ್ದೀರಿ ಆ ಒಂದು

ತೀರ್ಮಾನವನ್ನು ತಾವು ಮೊದಲು ಹೇಳಬೇಕು. ದಯಮಾಡಿ ಅದನ್ನು ಮೊದಲು ಕಂಪ್ಲೀಟ್ ಮಾಡಿ.

ಅಧ್ಯಕ್ಷರು : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆಯ ಸಚಿವರು ಮಾತನಾಡುತ್ತೇವೆಂದು ಹೇಳುತ್ತಿದ್ದಾರೆ. ಆದ್ದರಿಂದ ಅವರು ಏನು ಹೇಳುತ್ತಾರೆ ಎಂಬುದನ್ನು ಕೇಳೋಣ. ಎಲ್ಲರೂ ಸುಮ್ಮನೆ ಕುಳಿತುಕೊಳ್ಳಿ. ಅನಂತರ ತಾವು ಹೇಳಿ.

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ವಿರೋಧಪಕ್ಷದ ನಾಯಕರಾದಂಥ ಸನ್ಮಾನ್ಯ ಯಡಿಯೂರಪ್ಪನವರು ಒಂದು ಪಾಯಿಂಟ್ ಆಫ್ ಆರ್ಡರನ್ನು ಎತ್ತಿ, ಜನತಾದಳದ ಕೆಲವು ಶಾಸಕರು ತಮ್ಮ ನಾಯಕರನ್ನು ಆಯ್ಕೆ ಮಾಡಿಕೊಂಡಿರತಕ್ಕಂಥದರ ಬಗ್ಗೆ ಮನ್ನಣೆಯನ್ನು ಅಪೇಕ್ಷೆ ಮಾಡಿ ಅವರು ತಮಗೆ ಈಗ ಒತ್ತಾಯ ಸಹ ಮಾಡಿದರು. ಇವತ್ತು ಮುಖ್ಯವಾಗಿ ಸದನ ಕರೆದಿರತಕ್ಕಂಥದ್ದು ವಿಶ್ವಾಸ ಮತ ಗಳಿಸುವ ಬಗ್ಗೆ ಅಂದರೆ ಸರ್ಕಾರಕ್ಕೆ ಬಹುಮತ ಇದೆಯೋ ಅಥವಾ ಇಲ್ಲವೋ ಎಂಬುದರ ಬಗ್ಗೆ ನಿರ್ಣಯಿಸುವುದರ ಬಗ್ಗೆ. ಸನ್ಮಾನ್ಯ ಅಧ್ಯಕ್ಷರು ಅತ್ಯಂತ ನ್ಯಾಯಯುತವಾಗಿ ಈಗಾಗಲೇ ನಮಗೊಂದು ಸಂದೇಶವನ್ನು ಕೊಟ್ಟಿದ್ದಾರೆ. ಅದು ಏನು ಸಂದೇಶವೆಂದರೆ, ಮಾನ್ಯ ಎಂ.ಪಿ. ಪ್ರಕಾಶ್‌ರವರು ಇನ್ನೂ ಆ ಹುದ್ದೆಯಲ್ಲಿದ್ದಾರೆ. ಅವರನ್ನು ಆ ಹುದ್ದೆಯಿಂದ ಎಲ್ಲಿಯವರೆಗೆ ಬದಲಾಯಿಸುವುದಿಲ್ಲವೋ ಅಲ್ಲಿಯವರೆಗೆ ಇನ್ನೊಬ್ಬರನ್ನು ಆ ಹುದ್ದೆಗೆ ಇರತಕ್ಕಂಥದ್ದು ಅಥವಾ ಅದಕ್ಕೆ ಮನ್ನಣೆ ಕೊಡತಕ್ಕಂಥದ್ದು ಸಾಧ್ಯವಿಲ್ಲ.

(ಗೊಂದಲ)

ಶ್ರೀ ಡಿ.ಟಿ. ಜಯಕುಮಾರ್ : ಬದಲಾಯಿಸಬೇಕೆಂದು ನಾವು ಮನವಿ ಕೊಟ್ಟಿದ್ದೇವೆ.

(ಗೊಂದಲ)

ಶ್ರೀ ಸಿ. ಚೆನ್ನಿಗಪ್ಪ : ಮಾನ್ಯ ಅಧ್ಯಕ್ಷರೆ, ತಾವು ರೂಲಿಂಗ್ ಕೊಡುವುದಕ್ಕೆ ಹೊರಟಿದ್ದೀರಿ. ಆದ್ದರಿಂದ ಮೊದಲು ರೂಲಿಂಗ್ ಕೊಡಿ.

(ಗೊಂದಲ)

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ್ : ಇದರ ಬಗ್ಗೆ ಎರಡು ಕಡೆ ಚರ್ಚೆಯನ್ನು ತಾವು ಕೇಳಿದ್ದೀರಿ. ಆದ್ದರಿಂದ ಮತ್ತೆ ಇದರ ಬಗ್ಗೆ ಪ್ರಸ್ತಾವ ಮಾಡುವುದಕ್ಕೆ ಅವಕಾಶ ಇಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಈಗ ನೀವು ಮಾತನಾಡಿರತಕ್ಕಂಥದ್ದನ್ನು ಕೇಳಿದ್ದೇವೆ. ಈಗ ಮಾನ್ಯ ಹೆಚ್.ಕೆ. ಪಾಟೀಲ್‌ರವರು ಮಾತನಾಡುತ್ತಾರೆ. ಆದ್ದರಿಂದ ಅವರು ಮಾತನಾಡುವುದಕ್ಕೆ ಅವಕಾಶ ಕೊಟ್ಟಿ ಅನಂತರ ತಾವು ಕೂಡ ಮಾತನಾಡಿ ಮುಗಿಸಿ.

ಶ್ರೀ ಹೆಚ್.ಕೆ. ಪಾಟೀಲ್ : ಯಾವ ಹುದ್ದೆ ಇನ್ನೂ ಖಾಲಿಯಾಗಿರುವುದಿಲ್ಲ. ಅಲ್ಲಿ ಮತ್ತೊಬ್ಬರನ್ನು ತಂದು ಕೂರಿಸುವುದಕ್ಕೆ ಆಗುವುದಿಲ್ಲ. ಸನ್ಮಾನ್ಯ ಪ್ರಕಾಶ್‌ರವರು ಈ ದಿವಸ ಆ ಹುದ್ದೆಯಲ್ಲಿರುವುದಕ್ಕೆ ತಾವು ಈಗಾಗಲೇ ಮನ್ನಣೆ ಕೊಟ್ಟಿದ್ದೀರಿ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳ

ವಿಶ್ವಾಸಮತಕ್ಕೆ ಸಂಬಂಧಪಟ್ಟಂಥ ನಿರ್ಣಯವನ್ನು ಮೂವ್ ಮಾಡಲು ಅನುಮತಿ ಕೊಡಬೇಕೆಂದು ಕೇಳುತ್ತೇನೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಎಂ.ಪಿ. ಪ್ರಕಾಶ್‌ರವರ ಜಾಗದಲ್ಲಿ ಮಾನ್ಯ ಕುಮಾರಸ್ವಾಮಿಯವರನ್ನು ನೇಮಕ ಮಾಡಿಕೊಂಡಿದ್ದೇವೆಂದು ಬಹುಮತದಿಂದ ಅರ್ಜಿಯನ್ನು ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಹೆಚ್.ಕೆ. ಪಾಟೀಲ್ : ಆದ್ದರಿಂದ. ಆ ಒಂದು ಪಕ್ಷದ ಶಾಸಕಾಂಗ ಪಕ್ಷದ ನಾಯಕರನ್ನು ಬದಲಾಯಿಸಬೇಕೆಂದು ಮಾನ್ಯ ವಿರೋಧಪಕ್ಷ ನಾಯಕರು ಮಾತು ಏನಿದೆ ಅದು ಕಾನೂನು ಬಾಹಿರ ಮತ್ತು ನಿಯಮ ಬಾಹಿರವಲ್ಲದೆ ಅದು ಅನೈತಿಕವಾದದ್ದು. ಯಾವ ಕಾರಣಕ್ಕಾಗಿ ಬದಲಾಯಿಸುತ್ತಿದ್ದೀರಿ? ಒಂದು ಗಳಿಗೆಯ ಹಿಂದೆ ನಾಯಕರಾಗಿದ್ದಂಥ ಸನ್ಮಾನ್ಯ ಪ್ರಕಾಶ್‌ರವರನ್ನು ಯಾವ ಕಾರಣಕ್ಕಾಗಿ ಬದಲಾಯಿಸುತ್ತಿದ್ದೀರಿ ಎಂಬುದನ್ನು ನೀವು ಮೊದಲು ಕೇಳಬೇಕು. ಆದ್ದರಿಂದ ಸದನದಲ್ಲಿ ನಾಯಕತ್ವದ ಬದಲಾವಣೆ ಮಾಡತಕ್ಕಂಥದ್ದು ಯಾವುದೇ ಕಾರಣಕ್ಕೂ ಸರಿಯಾದದ್ದು ಅಲ್ಲ. ಅದು ನಿಯಮಬಾಹಿರವಾಗುತ್ತದೆ. ಆದ್ದರಿಂದ ಮಾನ್ಯ ಯಡಿಯೂರಪ್ಪನವರ ಬೇಡಿಕೆ ಏನಿದೆ ಅದು ಸಂಪೂರ್ಣವಾಗಿ ಸರಿಯಾದದ್ದು ಅಲ್ಲವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

(ಗೊಂದಲ)

ಅಧ್ಯಕ್ಷರು : ಈಗ ಮಾನ್ಯ ಚೆಲುವರಾಯಸ್ವಾಮಿಯವರು ಮಾತನಾಡಲಿ.

ಶ್ರೀ ಸಿ. ಚೆನ್ನಿಗಪ್ಪ : ಮಾನ್ಯ ಕುಮಾರಸ್ವಾಮಿಯವರು ನಮ್ಮ ಶಾಸಕಾಂಗ ಪಕ್ಷದ ನಾಯಕರೆಂದು ನಾವು ತೀರ್ಮಾನ ಮಾಡಿ ತಮಗೆ ಮನವಿ ಕೊಟ್ಟಿದ್ದೇವೆ. ಆದ್ದರಿಂದ ತಾವು ದಯಮಾಡಿ ಮಾನ್ಯತೆ ಮಾಡಿ ಈ ಸದನದಲ್ಲಿ ಪ್ರಕಟಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎನ್. ಚೆಲುವರಾಯಸ್ವಾಮಿ (ನಾಗಮಂಗಲ) : ಮಾನ್ಯ ಅಧ್ಯಕ್ಷರೆ ಸದನದಲ್ಲಿ ಗಂಭೀರವಾದಂತ ಚರ್ಚೆ ನಡೆಯಬೇಕೆಂದು ಮಾನ್ಯ ಅಧ್ಯಕ್ಷರು ಈಗಾಗಲೇ ಹೇಳಿದ್ದಾರೆ. ಈ ರಾಜ್ಯದ 5 ಕೋಟಿ ಜನ ಇವತ್ತಿನ ಸದನದ ಬಗ್ಗೆ ಮತ್ತು ಇಲ್ಲಿನ ತೀರ್ಮಾನದ ಬಗ್ಗೆ ಕಾಯ್ದು ನೋಡತಕ್ಕಂಥ ಒಂದು ವಾತಾವರಣ ಸೃಷ್ಟಿಯಾಗಿದೆ. ಕಳೆದ 20 ತಿಂಗಳಲ್ಲಿ ಸಮ್ಮಿಶ್ರ ಸರ್ಕಾರ ಅನಿವಾರ್ಯವಾದ ಪರಿಸ್ಥಿತಿಯಲ್ಲಿ ಸ್ಥಾಪನೆಯಾದ ಮೇಲೆ ಬಹುಶಃ ಅನೇಕ ಬಾರಿ ಸದನದ ಸಭೆಗಳು ನಡೆದು ಈ ಕರ್ನಾಟಕ ರಾಜ್ಯದ ಒಂದು ಹಿರಿಮೆಯನ್ನು ಹೆಚ್ಚು ಮಾಡಿರುವ ಬಗ್ಗೆ ಸಾಕಷ್ಟು ಚರ್ಚೆ ಈ ಸದನದಲ್ಲಿ ಆಗಿದೆ. ಹಿರಿಯ ಸದಸ್ಯರಾದಂಥ ಮಾನ್ಯ ಹೆಚ್.ಕೆ. ಪಾಟೀಲರವರ ಬಗ್ಗೆ ನನಗೆ ವೈಯಕ್ತಿಕವಾದಂಥ ಗೌರವ ಇದೆ. ಆದರೆ ನಾವು ಎಲ್ಲಾ ಸಂದರ್ಭದಲ್ಲಿ ಒಂದೇ ರೀತಿಯ ಮಾತನ್ನು ಆಡಬೇಕಾಗುತ್ತದೆ. ತಾವು ಸದನದಲ್ಲಿ ಇದ್ದಾಗ ಬಹುಶಃ ನಮಗೆ ಅನುಕೂಲವಾದಾಗ ಒಂದು ತರಹ ನಮಗೆ ಅನಾನುಕೂಲವಾದಾಗ ಒಂದು ತರಹ ನಮಗೆ ಸಪೋರ್ಟ್ ಕೊಟ್ಟಾಗ ಒಂದು ತರಹ ಆ ರೀತಿ ಆಗಬಾರದು. ಬಹುಶಃ ತಾವು ಇದೇ ಸದನದಲ್ಲಿ ಇದೆ ತಿಪ್ಪಣ್ಣನವರ ಅಧ್ಯಕ್ಷತೆಯಲ್ಲಿ ಶಾಸಕಾಂಗ

ಪಕ್ಷದ ಸಭೆ ಸೇರಿ ನಮ್ಮ ಹಳೆಯ ನಾಯಕರಾದ ಮಾನ್ಯ ಸಿದ್ದರಾಮಯ್ಯನವರನ್ನು ಬದಲಾವಣೆ ಮಾಡಿದಾಗ ಅವರು ಅಧ್ಯಕ್ಷತೆಯಲ್ಲಿದ್ದರು. ಅವತ್ತು ಶಾಸಕಾಂಗ ಪಕ್ಷದ ನಾಯಕರಾಗಿ ಇದ್ದರು. ನಾವು ಸಭೆ ಸೇರಿ ಬದಲಾಣೆ ಮಾಡಿ ಮಾನ್ಯ ಎಂ.ಪಿ. ಪ್ರಕಾಶ್‌ರವರನ್ನು ಆಯ್ಕೆ ಮಾಡಿದಾಗ ಮಾನ್ಯತೆಯನ್ನು ಕೊಟ್ಟಿರುವ ಬಗ್ಗೆ ಎಲ್ಲರಿಗೂ ಗೊತ್ತಿದೆ ಎನ್ನುವುದನ್ನು ನಾನು ಇನ್ನೊಂದು ಸಲ ಅವರಿಗೆ ಜ್ಞಾಪಕ ಮಾಡುವುದಕ್ಕೆ ಇಚ್ಛೆ ಪಡುತ್ತೇನೆ. ದಯಮಾಡಿ ಅವತ್ತು ನಾವು ಕೊಟ್ಟಿರುವಂಥ ಸಪೋರ್ಟ್‌ದಿಂದ ಸರ್ಕಾರ ಮುಂದುವರಿಸಲು ಅವರಿಗೆ ಅನುಕೂಲವಾಗುವ ದೃಷ್ಟಿಯಿಂದ ಯಾವುದೇ ರೀತಿಯ ಪ್ರತಿಕ್ರಿಯೆಯನ್ನು ಅವತ್ತು ಸದನದಲ್ಲಿ ವ್ಯಕ್ತಪಡಿಸಲಿಲ್ಲ. ಇವತ್ತು ಅದೇ ಪ್ರಕಾರ ಬಹುಮತದ 42 ಜನ ಶಾಸಕರು ಸೇರಿ ತಿಪ್ಪಣ್ಣನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ನಾವೆಲ್ಲರೂ ಒಮ್ಮತದಿಂದ ಕುಮಾರಸ್ವಾಮಿಯವರನ್ನು ಮಾನ್ಯ ಎಂ.ಪಿ. ಪ್ರಕಾಶರವರ ಬದಲಾಗಿ ಶಾಸಕಾಂಗ ಪಕ್ಷದ ನಾಯಕರನ್ನಾಗಿ ಆಯ್ಕೆ ಮಾಡಿ 19ನೇ ತಾರೀಖು ಖುದ್ದಾಗಿ ಬಂದು ತಿಪ್ಪಣ್ಣನವರ ಅಧ್ಯಕ್ಷತೆಯಲ್ಲಿ ಬಂದು ಕೊಟ್ಟಿದ್ದೇವೆ. ತಮ್ಮ ತೀರ್ಪನ್ನು ನಾವು ಕಾಯುತ್ತಿದ್ದೇವೆ. ದಯಮಾಡಿ ತಾವು ಯಾವುದೇ ತರಹದ ಉಹಾಪೋಹದ ಚರ್ಚೆಗೆ ಅವಕಾಶವನ್ನು ಕೊಡದೆ ತಮ್ಮ ತೀರ್ಪನ್ನು ಕೊಡಬೇಕು. ಮತ್ತು ಈ ಸದನದಲ್ಲಿ ಹಿರಿಯ ಸದಸ್ಯರದ ತಾವು ಅದನ್ನು ಗಂಭೀರವಾಗಿ ಕೇಳಬೇಕು ಎನ್ನುವುದನ್ನು ವಿನಂತಿ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಸಾರಿಗೆ ಮತ್ತು ಜಲಸಂಪನ್ಮೂಲ ಸಚಿವರು : ಮಾನ್ಯ ಅಧ್ಯಕ್ಷರೆ, ನಾನು ಹೇಳಬಹುದೇ ಅಧ್ಯಕ್ಷರೆ, ಈ ಸದನದ ಹೊರಗಡೆ ಏನು ನಡೆಯುತ್ತದೆ ಅದರ ಬಗ್ಗೆ ನಾವು ಮಾತನಾಡತಕ್ಕಂಥದ್ದರ ಬಗ್ಗೆಯಾಗಲಿ ಅದರ ಬಗ್ಗೆ ಹೇಳಿಕೆ ಹೇಳತಕ್ಕಂಥದ್ದು, ಆಗಲಿ ಅದು ನನಗೆ ಸಂಬಂಧಪಟ್ಟದ್ದು ಅಲ್ಲ. ಇವತ್ತು ಈ ಸದನದಲ್ಲಿ ಈ ವಿಷಯ ಪ್ರಸ್ತಾಪವಾಗಿದೆ ಎಂದು ಹೇಳಿ ನಾನು ಆ ವಿಷಯದ ಬಗ್ಗೆ ತಮ್ಮ ಮುಖಾಂತರ ಆ ಒಂದು ವಿಷಯವನ್ನು ಕೇಳುತ್ತಿದ್ದೇನೆ. ಯಾವ ರೀತಿಯಾಗಿ ಇಲ್ಲಿಯವರೆಗೆ ಪ್ರಕಾಶ್‌ರವರು ರಾಜೀನಾಮೆಯನ್ನು ಕೊಟ್ಟಿಲ್ಲ ಅಥವಾ ತಾವೂ ರಾಜೀನಾಮೆಯನ್ನು ಪಡೆದಿಲ್ಲ. ಮತ್ತು ಇವತ್ತೂ ಕೂಡ ಅವರು ನಾನೇ ಜೆಡಿ (ಎಸ್) ಲೀಡರ್ ಇದ್ದೇನೆಂದು ಘೋಷಣೆಯನ್ನು ಮಾಡಿದ್ದಾರೆ. ಸದನದ ಹೊರಗಡೆ ಕೂಡ ಮಾಡಿದ್ದಾರೆ. ಅನೇಕ ಸಭೆ ಸಮಾರಂಭಗಳಲ್ಲಿ ಕೂಡ ಮತ್ತು ಬಿಎಸಿ ಸಭೆಯಲ್ಲಿ ಕೂಡ ಪ್ರತಿಪಾದನೆ ಮಾಡಿದ್ದಾರೆ. ನೀವು ಸಿದ್ದರಾಮಯ್ಯನವರ ಬಗ್ಗೆ ಏಕೆ ಮಾತನಾಡಲಿಲ್ಲವೆಂದು ಕೇಳಿದಿರಿ, ನಾನು ಎಲ್ಲರ ಬಗ್ಗೆ ಮಾತನಾಡುವುದಕ್ಕೆ ಕಂಟ್ರಾಕ್ಟ್ ಏನಾದರೂ ಹಿಡಿದಿದ್ದೇನಾ? ನನಗೆ ಯಾವುದು ಮಾತನಾಡಬೇಕೋ ಅದನ್ನು ನಾನು ಮಾತನಾಡುತ್ತೇನೆ. ನಿಮಗೆ ಅವರ ಬಗ್ಗೆ ಮಾತನಾಡಬೇಕು ಅಂದರೆ ತಾವು ಮಾತನಾಡಿ. ನಿಮಗೆ ನಾನು ಬೇಡವೆಂದು ಹೇಳುವುದಿಲ್ಲ. ಆದರೆ ಇಲ್ಲಿ ಎಮೊಷನಲ್ ಆಗಿ ಅವರು ಬ್ಯಾಕ್‌ವರ್ಡ್ ಕ್ಲಾಸ್‌ದವರು ಅವರನ್ನು ಏಕೆ ಬಿಡ್ಡಿರಿ ಹೀಗೆಲ್ಲ ಎಂದು ಮಾತನಾಡುವುದಕ್ಕೆ ಹೋಗಬಾರದು. ಏಕೆಂದರೆ ಯಾರಿಗೂ ಕೂಡ ಲಘುವಾಗಿ ಮಾತನಾಡಿ ಬರೀ ಬ್ಯಾಕ್‌ವರ್ಡ್ ಕ್ಲಾಸ್‌ದವರಿಗೆ ಹೀಗೆ ಮಾಡುತ್ತೀರಿ, ಅವರಿಗೆ ಹೀಗೆ ಮಾಡುತ್ತೀರೆಂದು ಹೇಳಿಕೊಂಡು ಪ್ರತ್ಯಕ್ಷವಾಗಿ ಬ್ಲಾಕ್‌ಮೇಲ್ ಮಾಡತಕ್ಕಂಥ ತಂತ್ರಗಳನ್ನು ತಾವು ಉಪಯೋಗ ಮಾಡಬಾರದು. ಎಮೊಷನಲ್ ಆಗದೆ ಈ ವಿಷಯಕ್ಕೆ ಕಾನೂನು ರೀತಿ ಮಾತನಾಡಿ. ಇನ್ನುವರೆಗೆ ಅವರು ನಾನು ಇದ್ದೇನೆಂದು ಹೇಳುತ್ತಾರೆ, ಆಗ ಕೂಡ ಎಲ್ಲಿ ಹೇಳುತ್ತಾರೆಂದು ತಾವು ಕೇಳಿದರೆ,

ಇಲ್ಲಿ ಬಂದು ಹೇಳುತ್ತಾರೆ, ಈಗ ಹೋಗಿದ್ದಾರೆ. ಇವತ್ತು ಒಂದು ತಾಸು ಸಂತಾಪ ಸೂಚಕ ಸಭೆಯಲ್ಲಿ ಭಾಷಣವನ್ನು ಮಾಡಿದ್ದಾರೆ.

ಶ್ರೀ ಎನ್. ಚೆಲುವರಾಯಸ್ವಾಮಿ : ಮಾನ್ಯ ಅಧ್ಯಕ್ಷರೆ, ಉಪ ಮುಖ್ಯಮಂತ್ರಿಯಾಗಿ ಅವರು ಭಾಷಣವನ್ನು ಮಾಡಿದ್ದಾರೆ. ಉಪ ಮುಖ್ಯಮಂತ್ರಿಯಾಗಿ ಮುಂದುವರೆಯುತ್ತಿದ್ದಾರೆ. ಆದರೆ ಶಾಸಕಾಂಗ ಪಕ್ಷದ ನಾಯಕರಾಗಿ ನಾವು ಆಯ್ಕೆ ಮಾಡಿರುವ ಬಗ್ಗೆ ತಾವು ಅರ್ಥ ಮಾಡಿಕೊಳ್ಳಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಇವರು ಮಾತನಾಡುವಾಗ ನಾನು ಏನೂ ಮಾತನಾಡಲಿಲ್ಲ. ನಾನು ಕೇಳಿಕೊಂಡಿರುತ್ತೇನೆ. ಅದಕ್ಕೆ ಆ ಸ್ಥಾನ ಇನ್ನೂ ಖಾಲಿಯಾಗಿಲ್ಲ, ಖಾಲಿಯಾಗದಿರುವ ಸ್ಥಾನಕ್ಕೆ ಈಗಾಗಲೇ ನಾವು ಎಲೆಕ್ಟ್ ಮಾಡಿದ್ದೇವೆ ಅವರಿಗೆ ಮಾನ್ಯತೆ ಕೊಡಿ ಎಂದು ಹೇಳತಕ್ಕಂಥದ್ದು ಸಮಂಜಸವಲ್ಲ. ಕಾನೂನು ಬಾಹೀರವಾದಂಥದ್ದು ಆ ಒಂದು ಕೆಲಸ.

(ಗೊಂದಲ)

ಅಧ್ಯಕ್ಷರು : ನಾನು ಅವರಿಗೆ ಮಾತನಾಡಲು ಅವಕಾಶ ಕೊಟ್ಟಿರುತ್ತೇನೆ.

(ಗೊಂದಲ)

ಶ್ರೀ ಡಿ.ಟಿ. ಜಯಕುಮಾರ : ಮಾನ್ಯ ಅಧ್ಯಕ್ಷರೆ, ನಾವು ಮಾನ್ಯ ಕುಮಾರಸ್ವಾಮಿಯವರನ್ನು ನಾಯಕರನ್ನಾಗಿ ಆಯ್ಕೆ ಮಾಡಿರುತ್ತೇವೆ. ಮಾನ್ಯ ಚೆಲುವರಾಯಸ್ವಾಮಿಯವರು ಪ್ರಕಾಶ್‌ರವರ ಉಪ ಮುಖ್ಯಮಂತ್ರಿಯಾಗಿ ಮುಂದುವರೆಯುತ್ತಿದ್ದಾರೆಂದು ಹೇಳಿದ್ದಾರೆ, ಅದಕ್ಕಾಗಿ ಕುಮಾರಸ್ವಾಮಿಯವರು ಮಾನ್ಯ ಮುಖ್ಯಮಂತ್ರಿಯಾಗುತ್ತಾರೆಂದು ಹೇಳುತ್ತಿದ್ದೇವೆ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ : ಯಾವ ಸ್ಥಳ ಖಾಲಿ ಇಲ್ಲ, ಅದಕ್ಕೆ ತಾವು ಮೊದಲೇ ತುಂಬಿ, ಇಲ್ಲಿ ಹೇಳತಕ್ಕಂಥದ್ದು ಕಾನೂನು ಬಾಹಿರವಾದಂಥ ಕ್ರಮ ಎಂದು ನಾನು ಇಲ್ಲಿ ಹೇಳುತ್ತೇನೆ. ಇನ್ನೊಂದು ವಿಷಯ, ರಾಷ್ಟ್ರೀಯ ಅಧ್ಯಕ್ಷರು, ಇವತ್ತು ತಮಗೂ ಹಾಗೂ ಗೌರ್ನರವರಿಗೆ ಪತ್ರವನ್ನು ಬರೆದಿದ್ದಾರೆ. ಇಂತಿಂಥವರು ತಮ್ಮಲ್ಲಿ ಬಂದರೂ ಕೂಡ ಅದಕ್ಕೆ ನೀವು ಮಾನ್ಯತೆಯನ್ನು ಕೊಡಬಾರದು ಎಂದು. ಅದೇರೀತಿಯಾಗಿ ಇವತ್ತು ರಾಜ್ಯಪಕ್ಷದ ಅಧ್ಯಕ್ಷರನ್ನೂ ಕೂಡ ಕಾನೂನಿನ ರಿತ್ಯ ಚುನಾಯಿಸಿಲ್ಲ; ಅವರಿಗೂ ಕೂಡ ಮಾನ್ಯತೆ ಇಲ್ಲ ಎನ್ನತಕ್ಕಂಥದ್ದನ್ನು ಕೂಡ ಹೇಳಿದ್ದಾರೆ. ಇವತ್ತು ವಿಪ್ ಏನು ಕೊಟ್ಟಿದ್ದಾರೆ ಇವತ್ತು ಕಾನೂನು ಪ್ರಕಾರ ಈ ಚೀಫ್ ವಿಪ್ ಈ ಹಿಂದೆ ಕೂಡ: ಎಲೆಕ್ಟ್ ಆಗಿಲ್ಲ. ಮತ್ತು ಆ ಎಲ್ಲಾ ಅಧಿಕಾರವು ಕೂಡ vested with Prakash JDLP Leader ಆ ಅಧಿಕಾರವನ್ನು ತಾವು ಯಾವಾಗ ತೆಗೆದುಕೊಂಡಿರುತ್ತೀರಿ. ಅದಕ್ಕೆ ಯಾವಾಗ ಚುನಾವಣೆ ಆಯಿತು. ಇವೆಲ್ಲಾ ಪ್ರಶ್ನೆಗಳು ಇವೆ. ಅದಕ್ಕಾಗಿ ಪ್ರತಿಯೊಂದನ್ನೂ ಕೂಡ ಕಾನೂನು ಬಾಹಿರವಾಗಿ ಮಾಡಿ ಇಲ್ಲದೆ ಇರತಕ್ಕಂಥ ಜಾಗವನ್ನು ತುಂಬತಕ್ಕಂಥ ಪ್ರಯತ್ನವನ್ನು ಮಾಡಿ ಇವತ್ತು ಸದನದಲ್ಲಿ ಒಂದು ಕೆಟ್ಟ ಸಂಪ್ರದಾಯವನ್ನು ಹಾಕತಕ್ಕಂಥ ಪ್ರಯತ್ನವನ್ನು ಮಾಡುತ್ತಿದ್ದೇವೆಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ. ದಯವಿಟ್ಟು ಇದರ ಮೇಲೆ ತಾವು ರೂಲಿಂಗ್‌ನ್ನು ಕೊಡಬೇಕು. ಇದು ಸರಿಯೋ, ಇಲ್ಲವೋ ಎನ್ನತಕ್ಕಂಥದ್ದು; ಇಲ್ಲದಿದ್ದರೆ ನಾಳೆ ಏನಾಗುತ್ತದೆಂದರೆ, ಓಟ್ ಆಫ್ ಕಾನ್ವಿಡೆನ್ಸ್‌ನ್ನು ಮೂವ್ ಮಾಡುತ್ತಾರೆ ಡಿಬೇಟ್ ನಡೆಯುತ್ತದೆ ಅವರು ಏನೇನು ಹೇಳುತ್ತಾರೆ ಹೇಳಲಿ. ನಾವು ಅದಕ್ಕೆ ಏನು ಉತ್ತರವನ್ನು ಕೊಡಬೇಕು ಕೊಡೋಣ. ಬಹಳ ಆತುರದಲ್ಲಿ ಇದ್ದಾರೆ. ಅಷ್ಟು ಗಡಿಬಿಡಿಯನ್ನು

ಮಾಡಬೇಡಿ. ಬಹಳಷ್ಟು ಟೈಮ್ ಇದೆ. ಅಲ್ಲಿಗೆ ಹೋಗುವುದಕ್ಕೆ; ಅದಕ್ಕಾಗಿ ದಯವಿಟ್ಟು ಇದನ್ನು ಕೂಲಂಕಷವಾಗಿ ಯಾವುದನ್ನು ಕಾನೂನು ಬಿಟ್ಟು ಮಾಡುವುದು ಬಿಡ. ಕಾನೂನಿನ ಚೌಕಟ್ಟಿನಲ್ಲಿ ತಂದು ತಾವು ಏನು ಮಾಡಬೇಕು ಅದನ್ನು ಮಾಡಿ. ಅದಕ್ಕಾಗಿ ನನ್ನ ಪಾಯಿಂಟ್ ಆಫ್ ಆರ್ಡರ್ ಇದೆ. ಅದಕ್ಕಾಗಿ ಇದರ ಬಗ್ಗೆ ತಮ್ಮ ರೂಲಾನ್ ಹೇಳಬೇಕು.

ಅಧ್ಯಕ್ಷರು : ವಿಷಯ ಪ್ರಸ್ತಾಪದಲ್ಲಿದೆ. "ಈಗ ಜಾತ್ಯಾತೀತ ಜನತಾದಳದ ಅಧ್ಯಕ್ಷರಾದ ಮಾನ್ಯ ತಿಪ್ಪಣ್ಣನವರು", ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಕುಳಿತುಕೊಳ್ಳಿ, ಸ್ವಾಮಿ, ಅಧ್ಯಕ್ಷರು ಮಾತನಾಡುವುದಕ್ಕ ನೀವು ಬಿಡುವುದಿಲ್ಲವೇನು? ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ನಿಮಗೂ ಕೂಡ ಮಾತನಾಡುವುದಕ್ಕೆ ಬಿಡುವುದಿಲ್ಲ.

(ಗೊಂದಲ)

ಶ್ರೀ ಹೆಚ್.ಕೆ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ವಿಶ್ವಾಸ ಮತ ಕೇಳತಕ್ಕಂಥ ಸಂದರ್ಭಕ್ಕೆ...

(ಗೊಂದಲ)

ಅಧ್ಯಕ್ಷರು : ಮಾನ್ಯ ತಿಪ್ಪಣ್ಣನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಜಾತ್ಯಾತೀತ ಜನತಾದಳಕ್ಕೆ ಸೇರಿದ 41 ಜನ ವಿಧಾನಸಭಾ ಸದಸ್ಯರು ಒಂದು ಗೊತ್ತುವಳಿಯನ್ನು ಮಾಡಿ ಅದಕ್ಕೆ ಅವರೆಲ್ಲಾ ಸಹಿ ಮಾಡಿ ಅದನ್ನು ನನಗೆ ತಂದು 19ನೇ ತಾರೀಖು ಕೊಟ್ಟಿದ್ದಾರೆ. ಹಿಂದೆ ಇದೇ ರೀತಿಯಲ್ಲಿ ಆಗಿನ ನಾಯಕರಾಗಿದ್ದ ಸಿದ್ದರಾಮಯ್ಯನವರು ಇದ್ದಾಗ ಇದೇ ರೀತಿಯನ್ನು ಅನುಸರಿಸಿದ್ದರು. ಇದರ ಬಗ್ಗೆ ನಾನು ಅನೇಕ ಜನ ಕಾನೂನು ಪಂಡಿತರನ್ನು ಕೇಳಿದ್ದೇನೆ.

ಶ್ರೀ ಸಿದ್ಧರಾಮಯ್ಯ (ಚಾಮುಂಡೇಶ್ವರಿ) : ಮಾನ್ಯ ಅಧ್ಯಕ್ಷರೆ, ನನ್ನ ಹೆಸರನ್ನು ಕೇಸ್ ಲಾ ರೀತಿಯಲ್ಲಿ ಸುಪ್ರೀಂಕೋರ್ಟಿನಲ್ಲಿ ಏನೋ ತೀರ್ಮಾನವಾದಂತೆ ಮಾಡಿಕೊಂಡು ಬಂದು ಇಲ್ಲಿ ಕುಳಿತು ಬಿಟ್ಟಿದ್ದೀರಿ. ಮಾನ್ಯ ಅಧ್ಯಕ್ಷರೆ, ನನ್ನನ್ನು ತೆಗೆದದ್ದು ಕೂಡ ಕಾನೂನು ಬಾಹಿರ. ನಮ್ಮ ಪಕ್ಷದ ಕಾನ್‌ಸ್ಟಿಟ್ಯೂಷನ್ ಏನು ಇದೆಯಲ್ಲಾ, ಆ ಕಾನ್‌ಸ್ಟಿಟ್ಯೂಷನ್ ಪ್ರಕಾರ ನನ್ನನ್ನು ಏನೂ ತೆಗೆಯಲಿಲ್ಲ. ಪಕ್ಷದ ಕಾನ್‌ಸ್ಟಿಟ್ಯೂಷನ್ ಪ್ರಕಾರ ಯಾರು ಲೀಡರ್ ಆಫ್ ದಿ ರೆಜಿಸ್ಲೇಚರ್ ಪಾರ್ಟಿ ಇರುತ್ತಾರೆ ಅವರಿಗೆ ಮಾತ್ರ ಲೆಜಿಸ್ಲೇಚರ್ ಪಾರ್ಟಿ ಮೀಟಿಂಗ್ ಕರೆಯುವುದಕ್ಕೆ ಅಧಿಕಾರ ಇದೆಯೇ ಹೊರತು ಬೇರೆ ಯಾರಿಗೂ ಕೂಡ ಅಧಿಕಾರವಿಲ್ಲ. ಅಧ್ಯಕ್ಷರಿಗೆ ಇಲ್ಲ, ಬೇರೆ ಯಾವ ಸದಸ್ಯರಿಗೂ ಕೂಡ ಅಧಿಕಾರ ಇಲ್ಲ. ಆದರೂ ಕೂಡ ಆ ರೀತಿಯಾಗಿ ಕಾನೂನು ಬಾಹಿರವಾಗಿ ಮಾಡಿ ನನ್ನನ್ನು ತೆಗೆದುಹಾಕಿದ್ದೇವೆಂದು ಪತ್ರ ಕೊಟ್ಟ ಮೇಲೆ ನೀವು ಅದನ್ನು ಮನ್ನಣೆ ಮಾಡಿದ್ದೀರೆಂದರೆ ನಾನು ಸುಮ್ಮನಾಗಿದ್ದೇನೆ. ನಾವು ಕೋರ್ಟಿಗೆ ಹೋಗಬಾರದು ಎಂದು ಸುಮ್ಮನಾಗಿದ್ದೇವೆ. ಅದು ಕಾನೂನು ಬಾಹಿರವಾಗಿ ಆಗಿರುವಂತಹ ಕ್ರಮ, ಅದು ಒಂದು ಕೇಸ್ ಲಾ It is going to be a precedent in this House. ಅಂದರೆ It is not going to be a good precedent. Even to-day ನಾನು ಅದನ್ನು ಪ್ರತಿಭಟಿಸುತ್ತಿದ್ದೇವೆ. ನಾವು ಸಾರ್ವಜನಿಕರ ಮುಂದೆ ಹೋಗಿ ಹೇಳುತ್ತಿದ್ದೇವೆ. I have not been removed according to the Party Constitution. According to our party Constitution, i.e., Janataka Dal (S) Party Constitution, only

the Leader of the Legislature Party has got all the powers to convene a meeting of the Legislature Party and nobody else has got the powers under the Constitution. When such being the case, how can you call it legal or valid decision? It cannot be a valid decision; It cannot be a legal decision. ನಿಮ್ಮ ಸ್ಥಾನಕ್ಕೆ ಗೌರವ ಕೊಡಬೇಕೆಂದು ನಾವು ಸುಮ್ಮನಾಗಿದ್ದೇವೆಯೇ ಹೊರತು ಅದನ್ನು ಒಪ್ಪುವುದಕ್ಕೆ ಸಾಧ್ಯವೇ ಇಲ್ಲ. ಇದು ಒಂದು ಭಾಗ, ಎರಡನೆಯ ಭಾಗ, ಏನೆಂದರೆ, ಶ್ರೀಮಾನ್ ದೇವೇಗೌಡರು ಅವರು ಪಕ್ಷದ ರಾಷ್ಟ್ರೀಯ ಅಧ್ಯಕ್ಷರು, ಅವರು ಗೌರ್ನರ್‌ಗೆ ಏನು ಪತ್ರ ಬರೆದಿದ್ದಾರೆ, ನಿಮಗೆ ಏನು ಪತ್ರ ಬರೆದಿದ್ದಾರೆ, Mr.Thippanna is not above Deve Gowda. Mr. Thippanna is appointed by Mr.Deve Gowda who is the National President of the Party. He is subordinate to him. What is the letter of Mr. Deve Gowda? Mr. Deve Gowda has written a letter to the Speaker. ಕೆಲವು ಶಾಸಕರು ನಿಮಗೆ ಬಂದು ಪತ್ರವನ್ನು ಕೊಟ್ಟಿದ್ದಾರೆ, ಅದಕ್ಕೆ ಯಾವ ಮನ್ನಣೆಯನ್ನೂ ಕೊಡಬೇಡಿ ಎಂದು ಗೌರ್ನರ್‌ಗೆ ಮುಂದೆ ಹೇಳಿದ್ದಾರೆ. ಯಾವ ಕಾರಣಕ್ಕೂ ಅದಕ್ಕೆ ಮನ್ನಣೆಯನ್ನು ಕೊಡಕೂಡದು. ನಮ್ಮ ಶಾಸಕಾಂಗ ಪಕ್ಷದ ನಾಯಕ ಎಂ.ಪಿ. ಪ್ರಕಾಶ್‌ರವರೇ ಹೊರತು ಬೇರೆ ಯಾರೂ ಅಲ್ಲವೆಂದು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಈ ಹಿನ್ನೆಲೆಯಲ್ಲಿ ಬೇರೆ ಯಾರೂ ಕೂಡ ಆಗುವುದಕ್ಕೆ ಸಾಧ್ಯವಿಲ್ಲ. ಗೊಂದಲ ನಿರ್ಮಾಣವಾಗಿದೆ, Still M.P.Prakash claims that, he is the leader of the Legislature Party. He has not been removed according to the constitution of the Party. No Legislature Party Meeting has been convened. We are also members of the JD(S). No notice has been sent on us. Where the meeting was called? ಇದರ ಬಗ್ಗೆ ವಿಚಾರವನ್ನು ಮಾಡಬೇಕಾಗುತ್ತದೆ. ನಾವು ನಾಳೆ ಇಲ್ಲಿ ವೋಟ್ ಆಫ್ ಕಾನ್ಫಿಡೆನ್ಸ್ ತೆಗೆದುಕೊಳ್ಳುವ ಬಗ್ಗೆ ನಮ್ಮದೇನೂ ಚರ್ಚೆ ಇಲ್ಲ. ಯಾರಿಗೆ ಮೆಜಾರಿಟಿ ಇದೆ ಅವರು ಆಗುತ್ತಾರೆ, ಆದರೆ ಕಾನೂನುಗಳನ್ನೆಲ್ಲಾ ಗಾಳಿಗೆ ತೂರಿ ಪ್ರಜಾಪ್ರಭುತ್ವದ ಮೌಲ್ಯಗಳನ್ನೆಲ್ಲಾ ಗಾಳಿಗೆ ತೂರಿ ನಾವು ಯಾವುದೇ ನಡವಳಿಕೆಗಳನ್ನು ಇಲ್ಲಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಕೇಸ್ ಆಫ್ ಲಾ, ಆದ್ದರಿಂದ ಕೇಸ್‌ಲಾ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

(ಗೊಂದಲ)

ಇವತ್ತು ಗೌರ್ನರ್‌ಗೆ ಬರೆದಿರತಕ್ಕಂತಹ ಕಾಗದ ಅದನ್ನೂ ಕೂಡ ಗಮನದಲ್ಲಿಟ್ಟುಕೊಂಡು ತೀರ್ಮಾನ ಮಾಡಬೇಕೇ ಹೊರತು ಕೆಲವರು ಬಂದ ತಕ್ಷಣವೇ ಅವರು ಹೇಳಿದ್ದಾರೆ, ಎನ್ನತಕ್ಕಂಥದ್ದರಲ್ಲಿ ಯಾವುದೇ ಕಾನೂನಿನ ಸತ್ವ ಇಲ್ಲ. ಅದಕ್ಕೆ ಕಾನೂನಿನ ಆಧಾರವೂ ಕೂಡ ಇಲ್ಲ. ಆದ್ದರಿಂದ ನಾನು ದಯಮಾಡಿ ತಮ್ಮಲ್ಲಿ ಮನವಿಯನ್ನು ಮಾಡುತ್ತಿದ್ದೇನೆ. ಪದೇಪದೇ ನನ್ನ ಹೆಸರನ್ನು ಹೇಳುತ್ತಿದ್ದಾರೆ. ಅದು ಒಂದು ಸುಪ್ರಿಂಕೋರ್ಟು ಡಿಸಿಷನ್ ಆದ ರೀತಿಯಲ್ಲಿ ಅದೊಂದು ಹೈಕೋರ್ಟು ಡಿಸಿಷನ್ ಆದ ರೀತಿಯಲ್ಲಿ ಹೇಳುತ್ತಿದ್ದಾರೆ. ಹಾಗೆ ಹೇಳುವುದಕ್ಕಾಗುವುದಿಲ್ಲ. ಅದು ಕಾನೂನು ರೀತಿಯಾಗಿ ಅದಂತಹ ತೀರ್ಮಾನವಲ್ಲ. ಇಲ್ಲಿ ಇವತ್ತು ನೀವು ಏನು ತೀರ್ಪನ್ನು ಕೊಟ್ಟುಬಿಟ್ಟಿದ್ದೀರಿ ಅದನ್ನು ನಾನು ಕೊಶ್ಚನ್ ಮಾಡುವುದಕ್ಕೆ ಹೋಗುವುದಿಲ್ಲ. ಇವತ್ತು ಅದರ ಬಗ್ಗೆ ಮಾನ್ಯ ಸದಸ್ಯರಾದ

ಶ್ರೀರಾಮರೆಡ್ಡಿಯವರು ಪ್ರಸ್ತಾಪ ಮಾಡಿದ್ದಾರೆ. ಅವರು ಎತ್ತಿರುವ ಪ್ರಶ್ನೆ ಬಹಳ ಮೂಲಭೂತವಾದ ಸಂವಿಧಾನದ ಪ್ರಶ್ನೆ. ಆ ಪ್ರಶ್ನೆ ಇತ್ಯರ್ಥವಾಗದೆ ಈ ಸಭೆ ನಡೆಯುವುದಕ್ಕೆ ..... It is not at all a valid order.

(ಗೊಂದಲ)

All the Members who have gone to His Excellency the Governor and submitted a letter withdrawing the support to the very Government in which they are the partners. Immediately, they are disqualified as Members of the Party... ಇದು ಆಗಬೇಕಾಗಿರುವಂತಹದ್ದು. ಅದು ಬಿಟ್ಟು ಬೇರೆ ಎಲ್ಲಾ ಚರ್ಚೆಗಳು ನಡೆಯುತ್ತಿದೆ. ಆದ್ದರಿಂದ ಇದು ಕಾನೂನು ಬಾಹಿರವಾಗುತ್ತದೆ. ತಾವು ದಯಮಾಡಿ ಈ ಸದನದಲ್ಲಿ ಹೊಸ ಸಂಪ್ರದಾಯಗಳನ್ನು ಹಾಕಬಾರದು. ಹೊಸ ಪ್ರಿಸಿಡೆಂಟ್‌ಗಳು ಆಗಬಾರದು. ಕಳೆದ ಅನೇಕ ವರ್ಷಗಳಿಂದ ಇಲ್ಲಿ ಬಂದಿದೆಯಲ್ಲಾ ....

(ಗೊಂದಲ)

(ಈ ಹಂತದಲ್ಲಿ ಶ್ರೀ ಡಿ. ಟಿ. ಜಯಕುಮಾರ್‌ರವರು ಮಾತನಾಡುತ್ತಿದ್ದರು)

ಶ್ರೀ ಸಿದ್ದರಾಮಯ್ಯ : ನಾನು ಮಾತನಾಡುತ್ತಿದ್ದೇನೆ, ತಾವು ಕುಳಿತುಕೊಳ್ಳಿ. (ಡಿ.ಟಿ. ಜಯಕುಮಾರನ್ನು ಉದ್ದೇಶಿಸಿ) ಮಾನ್ಯ ಸಭಾಧ್ಯಕ್ಷರನ್ನು ಕೇಳಿ ತಾವು ಮಾತನಾಡಿ. ನಾನು ಅವರನ್ನು ಕೇಳಿ ಮಾತನಾಡುತ್ತಿದ್ದೇನೆ. ನಾನು ಅವರ ಪರ್ಮಿಶನ್‌ನ್ನು ತೆಗೆದುಕೊಂಡು ಮಾತನಾಡುತ್ತಿದ್ದೇನೆ. I have not yielded. It is the letter written by Mr. Deve Gowda. It is not my word.....

(ಗೊಂದಲ)

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡುವುದಕ್ಕೆ ತಾವು ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ದಯಮಾಡಿ ನನಗೆ ಅವಕಾಶವನ್ನು ಮಾಡಿಕೊಡಬೇಕು.

ಶ್ರೀ ಡಿ. ಟಿ. ಜಯಕುಮಾರ್ : ಮಾನ್ಯ ಅಧ್ಯಕ್ಷರೆ .....

ಅಧ್ಯಕ್ಷರು : ಮಾನ್ಯ ಸಿದ್ದರಾಮಯ್ಯನವರು ಏನು ಹೇಳುತ್ತಾರೆ ಅದನ್ನು ತಾವು ಕೇಳಿ.

(ಗೊಂದಲ)

SRI. SIDDARAMAIAH :- I being the National President of the Janata Dal (S) wish to inform you that my party has been extending its support to the coalition Government led by Sri. Dharmsingh. Sri.M.P. Prakash, Hon'ble Deputy Chief Minister has been recently elected as the Leader of the Janata Dal Legislature Party. As per the provisions of the Constitution and bye-laws of our party, he is the Head of the JDLP. Hence, any letter given to you by anybody other than M.P. Prakash is not having any party constitutional validity. Further, this is to be stated that election of Sri. M.P.Prakash, Leader of the Legislature Party.....

(ಗೊಂದಲ)

ಆವತ್ತು ಮಾಡಿದ್ದು ತಪ್ಪು, That is also illegal.

(ಗೊಂದಲ)

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ನಾನು ಅವರಿಗೆ ಅವಕಾಶವನ್ನು ಕೊಟ್ಟಿದ್ದೇನೆ. ದಯಮಾಡಿ ನೀವುಗಳೆಲ್ಲರೂ ಕುಳಿತುಕೊಳ್ಳಬೇಕು. ಅವರು ಏನು ಹೇಳುತ್ತಾರೆ ಅದನ್ನು ತಾವುಗಳು ಕೇಳಬೇಕು. ನೀವು ಹೌಸ್‌ನಲ್ಲೂ ಸಹ ಕೇಳದೆ ಇದ್ದರೆ ಹೇಗೆ ?

SRI. SIDDARAMAIAH :- I have all the rights.

ನಿಮ್ಮ ಅಭಿಪ್ರಾಯವನ್ನು ಹೇಳುವುದಕ್ಕೆ ಅವಕಾಶವಿದೆ ಆಗ ಹೇಳಿ. ಮಾನ್ಯ ಅಧ್ಯಕ್ಷರೆ, ಇದು ರಾಷ್ಟ್ರೀಯ ಅಧ್ಯಕ್ಷರಾದಂತಹ ಶ್ರೀ ದೇವೇಗೌಡರು ಗೌರ್ನರ್‌ಗೆ ಬರೆದಿರುವಂತಹ ಲೆಟರ್ : It is a copy of that letter ಇವರು ಏನು ಹೇಳಿದ್ದಾರೆಂದರೆ, "This is to be stated that the election of Sri. M.P.Prakash as the Leader of the JDLP has been recognised by the Hon'ble Speaker of Karnataka Legislative Assembly. It has come to my notice that to-day evening around 6-30 pm, a group of few MLAs of our Party have approached your goodself stating that they have withdrawn support to the coalition Government. As this group has not been authorised either by the Leader of the JDLP or by the National President of the Party, I request you not to give any credence to the letter given by a group of few MLAs."

ಇದು ದೇವೇಗೌಡರು ಬರೆದಿರುವಂತಹ ಪತ್ರ. ಅವತ್ತು ನನ್ನನ್ನು ....., ದಯಮಾಡಿ ಕೂರಿ.

(ಗೊಂದಲ)

ಆದ್ದರಿಂದ ನನ್ನನ್ನು ತೆಗೆದುಹಾಕಿರುವುದೂ ಕೂಡ ಇಲ್ಲೀಗಲ್, ಇದು ಫರ್ದರ್ ಇಲ್ಲೀಗಲ್ ಆಗುತ್ತದೆ. ದೇವೇಗೌಡರು ಪಕ್ಷದ ರಾಷ್ಟ್ರೀಯ ಅಧ್ಯಕ್ಷರು, ಅದನ್ನು ಒಪ್ಪಿಕೊಳ್ಳುತ್ತೀರೋ ಅಥವಾ ಇಲ್ಲವೋ ಅದು ನನಗೆ ಗೊತ್ತಿಲ್ಲ. ಅದನ್ನು ಒಪ್ಪಿಕೊಳ್ಳುವುದಾದರೆ ಇವರು ಪಕ್ಷದ ರಾಷ್ಟ್ರೀಯ ಅಧ್ಯಕ್ಷರು ಅವರು ಆದರೆ ಅವರು ಬರೆದಿರುವಂತಹ ಪತ್ರಕ್ಕೂ ಕೂಡ ಅದಕ್ಕೆ ಗೌರವ ಹಾಗೂ ಮನ್ನಣೆಯೂ ಕೂಡ ಇರುತ್ತದೆ. ಆದ್ದರಿಂದ ದಯಮಾಡಿ . . .

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅವರದು ಇನ್ನೂ ಮುಗಿದಿಲ್ಲ.

(ಗೊಂದಲ)

ಶ್ರೀ. ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಪಾಯಿಂಟ್ ಆಫ್ ಆರ್ಡರ್.

ಶ್ರೀ ಸಿದ್ದರಾಮಯ್ಯ : ಯಾವ ಪಾಯಿಂಟ್ ಇಲ್ಲ, ಆರ್ಡರ್ ಇಲ್ಲ ಕೇಳಿರಿ ಇಲ್ಲಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, . . .

ಅಧ್ಯಕ್ಷರು : ಮಾನ್ಯ ಸಿದ್ದರಾಮಯ್ಯನವರೆ, ಬೇಗನೆ ಮುಗಿಸಿ, ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ನಾನು ಮಧ್ಯದಲ್ಲಿ ಇಂಟರ್‌ಫಿಯರ್ ಆಗುವುದು ಸಂಸತ್‌ನಲ್ಲಿನ ಸಂಪ್ರದಾಯ. ನನ್ನದು ಒಂದೇ ಪಾಯಿಂಟ್, ಒಂದೇ ನಿಮಿಷ ಸಾರ್.

ಶ್ರೀ ಸಿದ್ದರಾಮಯ್ಯ : ನಾನು ಮುಗಿಸುತ್ತೇನೆ ಅನಂತರ ತಾವು ಹೇಳಿ.

(ಗೊಂದಲ)

ಯಡಿಯೂರಪ್ಪನವರೆ ನೀವು ಮಂತ್ರಿಗಳಾಗುವುದಕ್ಕೆ ನಮ್ಮದೇನೂ ತಕರಾರು ಇಲ್ಲ. ಸ್ವಲ್ಪ ನಾನು ಹೇಳುವುದನ್ನು ಕೇಳಿ.

ಶ್ರೀ ಕೆ.ಎಸ್.ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, . . .

ಮಾತನಾಡು ಎಂದರೆ ಯಾರು ಮಾತನಾಡುವುದು ಬೇಡವೇ, ಪಾಯಿಂಟ್ ಆಫ್ ಆರ್ಡರ್‌ಗೆ ಅನುಮತಿಯನ್ನು ಕೊಡುವುದಿಲ್ಲವೇ ?

ಶ್ರೀ ಬಿ.ಎಸ್.ಯಡಿಯೂರಪ್ಪ : ಕಳೆದ 35–40 ವರ್ಷಗಳಲ್ಲಿ ಇತಿಹಾಸದಲ್ಲಿ ಈ ಮನೆಯಲ್ಲಿ ಯಾವ ಪಕ್ಷದ ಸಭಾನಾಯಕ, ಅವರ ಪಕ್ಷದ ನಾಯಕ ಯಾರು ಇರಬೇಕೆಂಬುದರ ಬಗ್ಗೆ ಅದು ಆ ಪಕ್ಷಕ್ಕೆ ಬಿಟ್ಟಿರುವಂತಹ ವಿಚಾರ. ಕೊನೆಗೆ ಆ ಡಿಸ್‌ಕ್ರಿಶನರಿ ಪವರ್ ನಿಮಗೆ ಇದೆ, ನಿಮಗೆ ಮನವರಿಕೆಯಾದರೆ, ಅದನ್ನು ತೀರ್ಮಾನ ಮಾಡುವಂಥ ಹಕ್ಕು ನಿಮಗೆ ಇದೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಅವರು ಪಾಯಿಂಟ್ ಆಫ್ ಆರ್ಡರ್ ಮೇಲೆ ಮಾತನಾಡುತ್ತಿದ್ದಾರೆ. ಪಾಯಿಂಟ್ ಆಫ್ ಆರ್ಡರ್ ಎತ್ತಿ ಮಾತನಾಡುವುದಕ್ಕೆ ತಾವು ಅವಕಾಶವನ್ನು ಕೊಡುವುದಿಲ್ಲವೇ.

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಈ ಮನೆಯಲ್ಲಿ ಕಳೆದ 35–40 ವರ್ಷಗಳಲ್ಲಿ ಯಾವುದಾದರೂ ಪಕ್ಷದ ನಾಯಕನನ್ನು ಆಯ್ಕೆ ಮಾಡಿಕೊಂಡರೆ ಅದು ಸಂಖ್ಯಾ ಬಲದ ಆಧಾರದ ಮೇಲೆ ಆಗುತ್ತದೆ.

(ಗೊಂದಲ)

ಆ ಅಧಿಕಾರ ನಿಮಗೆ ಇದೆಯೇ ಹೊರತು ಸದನದ ಒಳಗಡೆ ಚರ್ಚೆ ಮಾಡುವ ಪದ್ಧತಿ ಇಲ್ಲ. ಆ ಸಂಪ್ರದಾಯ ನೀವು ಮಾಡಬೇಡಿ.

ಅಧ್ಯಕ್ಷರು :– ಆಯಿತು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಧ್ಯೆ ಎದ್ದು ಮಾತನಾಡುವುದು ಅಂದರೆ ಏನು ಅರ್ಥ?

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೇ, ನನ್ನ ಮನವಿ ಏನೆಂದರೆ ಈಗ ವಿರೋಧ ಪಕ್ಷದ ನಾಯಕರು ನನಗೆ ಮಾತನಾಡಲಿಕ್ಕೆ ಬಿಡುವುದಿಲ್ಲ ಎಂದರೆ ಹೇಗೆ?

ಶ್ರೀ ಕೆ.ಎಸ್.ಈಶ್ವರಪ್ಪ : ಪಾಯಿಂಟ್ ಆಫ್ ಆರ್ಡರ್ ಇದು.

ಶ್ರೀ ಸಿದ್ದರಾಮಯ್ಯ : ಅದರಲ್ಲಿ ಪಾಯಿಂಟ್ ಇಲ್ಲ, ಆರ್ಡರೂ ಇಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ : ಯಾವ ಪಕ್ಷದಲ್ಲಿ ಯಾರು ನಾಯಕರಾಗಬೇಕೆಂದು ಚರ್ಚೆ ಮಾಡುವುದು ಇಲ್ಲಲ್ಲ.

(ಗೊಂದಲ)

ಅಧ್ಯಕ್ಷರು : ನೀವು ಬೇಗ ಮಾತನಾಡಿ ಮುಗಿಸಿ.

ಶ್ರೀ ಸಿದ್ದರಾಮಯ್ಯ : ಅಧ್ಯಕ್ಷರೆ, ಆಯಿತು, ಮಾತನಾಡಿ ಮುಗಿಸುತ್ತೇನೆ. ಅವರಿಗೆ ದಯವಿಟ್ಟು ಮೊದಲು ಕುಳಿತುಕೊಳ್ಳುವುದಕ್ಕೆ ಹೇಳಿ. ಅವರು ಮಾತನಾಡುವುದು, ನಾನು ಮಾತನಾಡುವುದು ಎಂದರೆ ಹೇಗೆ ?

ಅಧ್ಯಕ್ಷರು : ಅದೇನೋ ಹೇಳುತ್ತಿದ್ದಾರೆ, ಕೇಳಿ ಏಕೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಅವರಿಗೆ ಬಹಳ ಆತುರ ಆಗಿಬಿಟ್ಟಿದೆ. ಏಕೆ ಇಷ್ಟು ಸಿಟ್ಟು ಮಾಡುತ್ತೀರಿ? ನೀವು ಖಂಡಿತ ಮಂತ್ರಿಗಳಾಗೇ ಆಗುವುದಂತೂ ಗ್ಯಾರಂಟಿ ಅಲ್ಲವೇ: ಹಾಗಿದ್ದರೆ ಏಕೆ ಇಷ್ಟು ಆತುರಪಡುತ್ತೀರಿ? ಮಾನ್ಯ ಅಧ್ಯಕ್ಷರೇ, ಈಗ ಈ ಎರಡು ಪತ್ರದ ಹಿನ್ನೆಲೆಯಲ್ಲಿ ನೀವು ನಮ್ಮ ಅಭಿಪ್ರಾಯವನ್ನು ಗಮನಿಸಬೇಕು ಎನ್ನುವಂತಹದು. ಅದರ ಬಗ್ಗೆ ತಮ್ಮ ನಿಲುವನ್ನು, ತಮ್ಮ ರೂಲಿಂಗ್ ಅನ್ನು ಕೊಡಬೇಕೆಂಬುದು ನನ್ನ ಮನವಿ. ಇನ್ನೊಂದು ಈಗ ಬೇಸಿಕ್ ಪ್ರಶ್ನೆಯನ್ನು ಎತ್ತಿದ್ದಾರೆ. ಕಾನೂನು ಪ್ರಶ್ನೆ ಅದು. ರಾಜ್ಯಾಂಗಕ್ಕೆ ಸಂಬಂಧಪಟ್ಟ ಪ್ರಶ್ನೆಯಾಗಿದೆ. ಶ್ರೀ.ರಾಮರೆಡ್ಡಿ, ಶ್ರೀ ವಾಟಾಳ್ ನಾಗರಾಜ್ ಹಾಗೂ ಶ್ರೀ ರಾಜೇಂದ್ರನ್ ಇವರು ಮೂವರೂ ಸಹ ಬಹಳ ಬೇಸಿಕ್ ಪ್ರಶ್ನೆಯನ್ನು ಎತ್ತಿದ್ದಾರೆ. ಏಕೆಂದರೆ ಇದರ ಮೇಲೆ ಒಂದು ಸ್ಪಷ್ಟವಾದಂತಹ ರೂಲಿಂಗ್ ಬರಬೇಕಾದುದು ಅಗತ್ಯವಾಗಿದೆ. ಅವರ ಪ್ರಶ್ನೆ ಏನೆಂದರೆ, ಇವತ್ತು ಗವರ್ನರ್ ಹತ್ತಿರ ಯಾರ್ಯಾರು ಹೋಗಿದ್ದಾರೆ.

ಅಧ್ಯಕ್ಷರು : ಸಿದ್ದರಾಮಯ್ಯನವರೇ, ಅದರ ಬಗ್ಗೆ ರೂಲಿಂಗ್ ಕೊಟ್ಟಿದ್ದೇನೆ.

(ಗೊಂದಲ)

Sri. SIDDARAMAIAH : The House is not in order, My question is, the House is not in order.

(ಗೊಂದಲ)

(ಈ ಹಂತದಲ್ಲಿ ಒಟ್ಟಿಗೆ ನಾಲ್ಕೈದು ಜನ ಮಾನ್ಯ ಸದಸ್ಯರು ಎದ್ದು ನಿಂತು ಮಾತನಾಡುತ್ತಿದ್ದರು)

ಶ್ರೀ ಸಿದ್ದರಾಮಯ್ಯ : ಹೌಸ್ ಆರ್ಡರ್‌ನಲ್ಲಿ ಇಲ್ಲದೇನೇ, ಲೀಗಲ್ ಆಗಿ ಇಲ್ಲದಿದ್ದರೆ ಇಲ್ಲಿ ಪ್ರೊಸೀಡಿಂಗ್ಸ್ ಆದರೆ ಅದಕ್ಕೆ ಏನು ಕಿಮ್ಮತ್ತು ಇರುತ್ತದೆ ಹೇಳಿ ನೋಡೋಣ? ಯಾವ ಕಿಮ್ಮತ್ತಿರುತ್ತದೆ ಹೇಳಿ ಅಧ್ಯಕ್ಷರೆ? ನೀವು ವಕೀಲರಾಗಿದ್ದಂತಹವರು. ಕಾನೂನಿನ ಚೌಕಟ್ಟನ್ನು ಬಿಟ್ಟು, ನಿಯಮಾವಳಿಗಳನ್ನು ಬಿಟ್ಟು, ಅದನ್ನೆಲ್ಲಾ ಗಾಳಿಗೆ ತೂರಿ ಮಾಡತಕ್ಕಂತಹುದು ಈ ಸದನಕ್ಕೆ ಗೌರವವನ್ನು ತರತಕ್ಕಂತಹ ಕೆಲಸವಲ್ಲ. ಒಂದು ಸತ್ಸಂಪ್ರದಾಯವನ್ನು ಪಾಲಿಸಿಕೊಂಡು ಬಂದಿರತಕ್ಕಂತಹ ಈ ಸದನ, ಆದುದರಿಂದ ಕಾನೂನಿನ ಚೌಕಟ್ಟಿನೊಳಗೆ ತಾವು ತೀರ್ಮಾನ ಮಾಡಬೇಕು. ಹಾಗೆ ತೀರ್ಮಾನವನ್ನು ಮಾಡದೇ ಹೋದರೆ The House itself is not in order. ಸಭೆ ಆರ್ಡರ್‌ಗೆ

ಬರದೇನೇ ಏನೇ ಚರ್ಚೆಗಳು ನಡೆದರೂ ಕೂಡ ಏನೇ ಇಲ್ಲಿ ಪ್ರೊಸೀಡಿಂಗ್ಸ್ ಆದರೂ ಕೂಡ, ತೀರ್ಮಾನಗಳಾದರೂ ಕೂಡ ಅವು ಲೀಗಲ್ ಆಗುವುದಿಲ್ಲ ಎಂಬುದು ನನ್ನ ಸ್ಪಷ್ಟ ಅಭಿಪ್ರಾಯ. ಇದನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಇದನ್ನು ದಯಮಾಡಿ ಕನ್ಸಿಡರ್ ಮಾಡಬೇಕಾಗಿ ನಿಮ್ಮಲ್ಲಿ ನನ್ನ ಮನವಿ.

(ಗೊಂದಲ)

6. ಪ್ರಕಟಣೆ

ವಿಷಯ : ಶ್ರೀ ಹೆಚ್.ಡಿ. ಕುಮಾರಸ್ವಾಮಿ ಅವರನ್ನು ಜನತಾದಳದ ಶಾಸಕಾಂಗ ಪಕ್ಷದ ನಾಯಕರನ್ನಾಗಿ ಘೋಷಣೆ ಮಾಡುವ ಬಗ್ಗೆ.

ಅಧ್ಯಕ್ಷರು : ಈಗ ೪೧ ಜನ ಸದಸ್ಯರು ನಿರ್ಣಯವನ್ನು ಮಾಡಿ ಏನು ಪತ್ರವನ್ನು ನನಗೆ ಕೊಟ್ಟಿದ್ದೀರೋ ಅವರ ಸಹಿಗಳನ್ನೆಲ್ಲಾ ವೆರಿಫೈ ಮಾಡಲಾಗಿದೆ. ನಾನು ಬಹಳ ಜನ ಕಾನೂನು ಪಂಡಿತರ ಜೊತೆ ಮಾತನಾಡಿದ್ದೇನೆ. ಹಾಗಾಗಿ ಏನೊಂದು 41 ಜನ ಸದಸ್ಯರ ಸಹಿ ಇರುವ ಪಟ್ಟಿ ನನಗೆ ಬಂದಿತ್ತು ಅದು ಬಿಟ್ಟು ಬೇರೆ ಯಾರಿಂದಲೂ ನನಗೆ ಬಂದಿಲ್ಲ. ಆ ಕಾರಣದಿಂದ ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರನ್ನು ಜನತಾದಳ ಶಾಸಕಾಂಗದ ಪಕ್ಷದ ನಾಯಕರನ್ನಾಗಿ ಘೋಷಣೆ ಮಾಡಲಾಗಿದೆ.

(ಗೊಂದಲ)

(ಈ ಹಂತದಲ್ಲಿ ಎಲ್ಲಾ ಮಾನ್ಯ ಸದಸ್ಯರು ಎದ್ದು ನಿಂತು ಮಾತನಾಡುತ್ತಿದ್ದರು)

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಎಲ್ಲಾ ಸದಸ್ಯರು, ಕನ್ನಡ ವಾಟಾಳ್ ಪಕ್ಷದ ಶ್ರೀ ವಾಟಾಳ್ ನಾಗರಾಜ್ ಹಾಗೂ ಸಿ.ಪಿ.ಎಂ.ನ ಶ್ರೀ ಜಿ.ವಿ. ಶ್ರೀರಾಮರೆಡ್ಡಿ ಅವರು, ರಿಪಬ್ಲಿಕನ್ ಪಕ್ಷದ ಶ್ರೀ ಎಸ್. ರಾಜೇಂದ್ರನ್ ಅವರು ಧಿಕ್ಕಾರ ಧಿಕ್ಕಾರ ಎಂದು ಘೋಷಣೆ ಕೂಗುತ್ತಾ ಬಾವಿಗೆ ಬಂದರು)

(ಗೊಂದಲ)

7.ವಿಶ್ವಾಸಮತ ನಿರ್ಣಯವನ್ನು ಮಂಡಿಸುವಂತೆ ಮಾನ್ಯ ಮುಖ್ಯ ಮಂತ್ರಿಗಳಿಗೆ ಸೂಚನೆ.

ಅಧ್ಯಕ್ಷರು : ನಾನು ಈಗ ಮಾನ್ಯ ಮುಖ್ಯಮಂತ್ರಿಯವರನ್ನು ವಿಶ್ವಾಸ ಮತ ನಿರ್ಣಯವನ್ನು ಮಂಡಿಸಲು ಕೋರುತ್ತೇನೆ.

(ಗೊಂದಲ)

ಅಧ್ಯಕ್ಷರು : ಈಗ ಸದನವನ್ನು ಅರ್ಧ ಗಂಟೆ ಕಾಲ ಮುಂದೂಡುತ್ತಿದ್ದೇನೆ.

(ಗೊಂದಲ)

(ಸದನವು ಪಿ.ಳಿಪಿ ಕ್ಕೆ ಮುಂದೂಡಲ್ಪಟ್ಟು ಅರ್ಧ ಗಂಟೆ ನಂತರ ಸಮಾವೇಶಗೊಳ್ಳಲು ನಿರ್ಧರಿಸಿತು.)

(ಸದನವು ಮತ್ತೆ ಸಂಜೆ 6.40ಕ್ಕೆ ಪುನ: ಸಮಾವೇಶಗೊಂಡಿತು)

ಸನ್ಮಾನ್ಯ ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

(ಕಾಂಗ್ರೆಸ್ ಸದಸ್ಯರುಗಳು ಬಾವಿಯಿಂದ ಧಿಕ್ಕಾರ, ಧಿಕ್ಕಾರ ಎಂದು ಘೋಷಣೆಗಳನ್ನು ಕೂಗುತ್ತಿದ್ದರು)